# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಗುರುವಾರ, ಏಪ್ರಿಲ್ 22, 2021

ಸಂಪುಟ : 47 ಸಂಚಿಕೆ : 352 ☎ 254736 91642 99999 RNI No: 27369/75, KA/SK/CTA-275/2021-2023. O/P @ J.D. Circle P.O. ಪುಟ : 4 ರೂ : 4.00 www.janathavani.com janathavani@mac.com


## ರಾತ್ರಿ 9ಕ್ಕೆ ಸ್ತಬ್ಧವಾದ ದಾವಣಗೆರೆ

### ನೈಟ್ ಕರ್ಫ್ಯೂ ಹಿನ್ನೆಲೆ: ರಾತ್ರಿ ನಗರ ಸಂಚರಿಸಿದ ಡಿಸಿ



ದಾವಣಗೆರೆ, ಏ.21- ಕೊರೊನಾ 2ನೇ ಅಲೆ ತಡೆಯುವ ನಿಟ್ಟಿನಲ್ಲಿ ರಾಜ್ಯವ್ಯಾಪಿ ರಾತ್ರಿ ಮತ್ತು ವಾರಾಂತ್ಯ ಕರ್ಫ್ಯೂ ಜಾರಿಗೊಂಡ ಹಿನ್ನೆಲೆಯಲ್ಲಿ ಇಂದು ರಾತ್ರಿ 9 ಗಂಟೆಗೆ ನಗರ ಸ್ತಬ್ದವಾಗಿತ್ತು.

ರಾತ್ರಿ ಕರ್ಫ್ಯೂಗೆ ಜನರಿಂದ ಉತ್ತಮ ಸ್ಪಂದನೆ ಸಿಕ್ಕಿದ್ದು, ಅಂಗಡಿ-ಮುಂಗಟ್ಟುಗಳು ಬಂದ್ ಆಗಿದ್ದವು. ರಸ್ತೆಗಳಲ್ಲಿ ವಾಹನ ಸಂಚಾರ ಕ್ಷೀಣಿಸಿತ್ತು.

**ಡಿಸಿ ನೇತೃತ್ವದಲ್ಲಿ ನಗರ ಪ್ರದಕ್ಷಿಣೆ:** ಮೊದಲನೇ ದಿನದ ನೈಟ್ ಕರ್ಫ್ಯೂ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿ ಮಹಾಂತೇಶ ಬೀಳಗಿ ನೇತೃತ್ವದಲ್ಲಿ ಉಪವಿಭಾಗಾಧಿಕಾರಿ ಮಮತಾ ಹೊಸಗೌಡರ್, ತಹಸೀಲ್ದಾರ್ ಗಿರೀಶ್, (3ನೇ ಪುಟಕ್ಕೆ)

ಇಂದಿನಿಂದ ಮೇ 4ರ ಮಧ್ಯರಾತ್ರಿವರೆಗೆ 144 ನೇ ಸೆಕ್ಷನ್ ಜಾರಿಯಲ್ಲಿರುತ್ತದೆ. ಸರ್ಕಾರದ ಮಾರ್ಗಸೂಚಿಯಂತೆ ನೈಟ್ ಕರ್ಫ್ಯೂ ಅಲ್ಲದೇ, ಹಗಲು ವೇಳೆಯು ಅಗತ್ಯ ವಸ್ತುಗಳ ಸೇವೆ ಬಿಟ್ಟು ಉಳಿದೆಲ್ಲವು ನಾಳೆ ಬಂದ್ ಆಗಲಿವೆ. ಬಟ್ಟೆ ಹಾಗೂ ಬೆಳ್ಳಿ-ಬಂಗಾರದ ಅಂಗಡಿ ಸೇರಿದಂತೆ ಹಲವು ಅಂಗಡಿಗಳು ಬಂದ್ ಆಗುವವು. ಹೋಟೆಲ್ ಗಳಲ್ಲಿ ಪಾರ್ಸಲ್‌ಗೆ ಮಾತ್ರ ಅವಕಾಶ ಇದೆ. ವಿಶ್ವವಿದ್ಯಾನಿಲಯ ವ್ಯಾಪ್ತಿಯ ಕಾಲೇಜುಗಳಲ್ಲಿ ಪರೀಕ್ಷೆಗಳು ಕೋವಿಡ್ ಮಾರ್ಗಸೂಚಿಯಂತೆ ನಡೆಯಲಿವೆ.

**- ಮಹಾಂತೇಶ್ ಬೀಳಗಿ, ಜಿಲ್ಲಾಧಿಕಾರಿ**

## ಮುಷ್ಕರ ಬಿಟ್ಟು ಕರ್ತವ್ಯದತ್ತ ಸಾರಿಗೆ ನೌಕರರು

ದಾವಣಗೆರೆ, ಏ.21- 6ನೇ ವೇತನ ಆಯೋಗ ಜಾರಿಗೆ ಆಗ್ರಹಿಸಿ ಕಳೆದ 15 ದಿನಗಳಿಂದ ನಡೆಸುತ್ತಿದ್ದ ಮುಷ್ಕರವನ್ನು ಸಾರಿಗೆ ನೌಕರರು ಕೈ ಬಿಟ್ಟು ಕರ್ತವ್ಯಕ್ಕೆ ಹಾಜರಾಗಲು ಮುಂದಾಗಿದ್ದಾರೆ. ಸಾರಿಗೆ ಬಸ್ ಗಳು ಸಹ ಸಂಪೂರ್ಣವಾಗಿ ರಸ್ತೆಗಿಳಿಯಲಾರಂಭಿಸಿವೆ.

ಮುಷ್ಕರ ಕೈಬಿಟ್ಟು ಕರ್ತವ್ಯಕ್ಕೆ ಹಾಜರಾಗುವಂತೆ ಸೂಚಿಸಿದ ಹೈಕೋರ್ಟ್ ಸೂಚನೆಗೆ ತಲೆ ಬಾಗಿರುವ ಸಾರಿಗೆ ನೌಕರರು ಅನಿರ್ದಿಷ್ಟಾವಧಿ ಮುಷ್ಕರದಿಂದ ಸದ್ಯಕ್ಕೆ ದೂರ ಸರಿದು ಕರ್ತವ್ಯದತ್ತ ಹೆಜ್ಜೆ ಹಾಕಿದ್ದಾರೆ. ಈ ಹಿನ್ನೆಲೆಯಲ್ಲಿ ನಗರದಲ್ಲಿಂದು ಸಾರಿಗೆ ಬಸ್ ಗಳ ಸಂಚಾರ ಹೆಚ್ಚಳವಾಗಿ ರುವುದು ಕಂಡು ಬಂತು.

ಇಂದು ಸುಮಾರು 150 ಸಾರಿಗೆ (3ನೇ ಪುಟಕ್ಕೆ)

# ಜಿಲ್ಲಾ ಗಡಿಯಲ್ಲಿ ಚೆಕ್ ಪೋಸ್ಟ್

## ಕೊರೊನಾ ನಿಯಂತ್ರಿಸಲು ತಪಾಸಣೆ ಮಾಡಿ ಒಳಬಿಡಲು ಸಚಿವ ಭೈರತಿ ಸೂಚನೆ



ದಾವಣಗೆರೆ, ಏ.21- ಜಿಲ್ಲೆಗೆ ಹೊರ ಜಿಲ್ಲೆಗಳಿಂದ ವಾಹನಗಳು ಬರುವ ಮಾರ್ಗಗಳಲ್ಲಿ ಬ್ಯಾರಿಕೇಡ್ ಹಾಕಿ ತಪಾಸಣೆ ನಡೆಸಲು ಕ್ರಮ ಕೈಗೊಳ್ಳುವಂತೆ ನಗರಾಭಿವೃದ್ಧಿ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರೂ ಆದ ಬಿ.ಎ. ಬಸವರಾಜ್ ಅಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲಾಡಳಿತ ಭವನದ ತುಂಗಭದ್ರಾ ಸಭಾಂಗಣದಲ್ಲಿ ಬುಧವಾರ ಕೋವಿಡ್ ಪರಿಸ್ಥಿತಿ ಕುರಿತ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಕೋವಿಡ್ ತಡೆಗೆ ಪರಿಣಾಮಕಾರಿ ಕ್ರಮ ತೆಗೆದುಕೊಳ್ಳಬೇಕಿದ್ದು, ಈ ದಿಸೆಯಲ್ಲಿ ಜಿಲ್ಲೆಯ ಗಡಿ ಪ್ರವೇಶಿಸುವ ಮಾರ್ಗಗಳಲ್ಲಿ ಬಿಗಿ ಕ್ರಮ ಕೈಗೊಳ್ಳಬೇಕು ಹಾಗೂ ಹೈವೇ ರಸ್ತೆಯಿಂದ ನಗರಕ್ಕೆ ಪ್ರವೇಶಿಸುವ ವಾಹನಗಳ ಮೇಲೂ ನಿಗಾ ಇಡುವಂತೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗೆ ಸೂಚಿಸಿದರು.

ಜಾತ್ರೆ, ರಥೋತ್ಸವಗಳನ್ನು ರದ್ದುಗೊಳಿಸಿ, ದೇವಸ್ಥಾನ, ಮಸೀದಿ, ಚರ್ಚುಗಳಲ್ಲಿ ಜನಸಂದಣಿಯನ್ನು ತಡೆಗಟ್ಟಲು ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳುವಂತೆ ಸೂಚಿಸಿದರು.

ಕೋವಿಡ್ ಚಿಕಿತ್ಸೆಗಾಗಿ ಖಾಸಗಿ ಆಸ್ಪತ್ರೆಗಳಲ್ಲಿ ಶೇ.50ರಷ್ಟು ಬೆಡ್‌ಗಳು ಮೀಸಲಿರಬೇಕು. ಯಾವುದೇ ಪ್ರಭಾವಕ್ಕೆ ಒಳಗಾಗಿ ಆಸ್ಪತ್ರೆಗಳಿಗೆ ವಿನಾಯಿತಿ ನೀಡಬಾರದು. ಒಂದು ವೇಳೆ ಆಸ್ಪತ್ರೆಗಳು ಸಹಕರಿಸದಿದ್ದರೆ ಮಾನ್ಯತೆ ರದ್ದುಪಡಿಸಿ ಎಂದು ಜಿಲ್ಲಾಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲಾಧಿಕಾರಿಗಳು ಪ್ರತಿಕ್ರಿಯಿಸಿ 9 ಸರ್ಕಾರಿ ಆಸ್ಪತ್ರೆಗಳಲ್ಲಿ 1450 ಬೆಡ್ ಹಾಗೂ 11 ಖಾಸಗಿ ಆಸ್ಪತ್ರೆಗಳಲ್ಲಿ 2273 ಬೆಡ್ ಸೇರಿದಂತೆ ಒಟ್ಟು 3723 ಬೆಡ್‌ಗಳು ಜಿಲ್ಲೆಯಲ್ಲಿ ಕೋವಿಡ್ ರೋಗಿಗಳಿಗೆ ಚಿಕಿತ್ಸೆಗೆ ಮೀಸಲಿದ್ದು, ಈ ಪೈಕಿ ಸದ್ಯ 293 ಬೆಡ್‌ಗಳಲ್ಲಿ ಕೋವಿಡ್ ರೋಗಿಗಳು ಚಿಕಿತ್ಸೆ ಪಡೆಯುತ್ತಿದ್ದಾರೆ. ಜಿಲ್ಲೆಯಲ್ಲಿ ಚಿಗಟೇರಿ ಜಿಲ್ಲಾಸ್ಪತ್ರೆಯಲ್ಲಿ 6000 ಲೀ. ಸಾಮರ್ಥ್ಯದ ಆಕ್ಸಿಜನ್ ಘಟಕ ಲಭ್ಯವಿದ್ದು, ಇದರ ಜೊತೆಗೆ ಖಾಸಗಿಯಲ್ಲಿಯೂ ಆಕ್ಸಿಜನ್ ಪೂರೈಕೆಗೆ ವ್ಯವಸ್ಥೆ ಮಾಡಿಕೊಳ್ಳಲಾಗಿದೆ. ಹೀಗಾಗಿ ಜಿಲ್ಲೆಯಲ್ಲಿ ಆಕ್ಸಿಜನ್‌ನ ಯಾವುದೇ ತೊಂದರೆ ಇಲ್ಲ ಎಂದರು.

ಜಿಲ್ಲೆಯಲ್ಲಿ ತಾವೇ ಖುದ್ದಾಗಿ ಜನನಿಬಿಡ ಸ್ಥಳಗಳಿಗೆ ಭೇಟಿ ನೀಡಿ, ಮಾಸ್ಕ್ ಅಭಿಯಾನ ನಡೆಸುತ್ತಿದ್ದು, ಜನರು ಏನೂ ಆಗಿಯೇ ಇಲ್ಲವೆಂಬಂತೆ ನಿರ್ಭೀತಿಯಿಂದ ಮಾಸ್ಕ್ ಇಲ್ಲದೇ ಸಾಮಾಜಿಕ ಅಂತರ ಮರೆತು ವರ್ತಿಸುತ್ತಿರುವುದು (2ನೇ ಪುಟಕ್ಕೆ)

### ಗುರಿ ತಲುಪದ ಲಸಿಕೆ : ತರಾಟೆ

ಕೋವಿಡ್ ಲಸಿಕೆ ವಿತರಣೆ ಗುರಿ ಏಕೆ ತಲುಪಿಲ್ಲ? ಜಿಲ್ಲಾಧಿಕಾರಿಗಳೇ ಏನ್ ಮಾಡ್ತಿದ್ದೀರಿ? ನನಗೆ ಕುಂಟು ನೆಪ ಹೇಳಬೇಡಿ. ಎಲ್ಲಾ ತಾಲ್ಲೂಕುಗಳಲ್ಲೂ ಟಾರ್ಗೆಟ್ ರೀಚ್ ಮಾಡುವುದು ನಿಮ್ಮ ಜವಾಬ್ದಾರಿ. ನಾಳೆ ಏನಾದರೂ ಅನಾಹುತವಾದರೆ ಜನ ನಮ್ಮನ್ನು ಕೇಳ್ತಾರೆಯೇ ಹೊರತು, ನಿಮ್ಮನ್ನಲ್ಲ.

ಮುಂದೇನಾದರೂ ಸೋಂಕು ಹೆಚ್ಚಾಗಿ ಅನಾಹುತವಾದರೆ ಜಿಲ್ಲಾಧಿಕಾರಿ ಹಾಗೂ ಎಸ್ಪಿ ಅವರನ್ನು ಗುರಿ ಮಾಡಬೇಕಾಗುತ್ತದೆ. ಜಿಲ್ಲೆಯ ಜನತೆಯ ರಕ್ಷಣೆ ನಮ್ಮ ಜವಾಬ್ದಾರಿ. ಕೋವಿಡ್ ಕೇಸುಗಳ ಸಂಖ್ಯೆ ಸೊನ್ನೆಯಾಗಬೇಕು. ಅಗತ್ಯವಾದರೆ ನಾನು ಜಿಲ್ಲೆಯಲ್ಲಿಯೇ ವಾಸ್ತವ್ಯ ಹೂಡಲು ಸಿದ್ಧನಿದ್ದೇನೆ.

ಇಂದಿನ ಸಭೆಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜ ಅವರು ಅಧಿಕಾರಿಗಳನ್ನು (2ನೇ ಪುಟಕ್ಕೆ)

### 1.44 ಲಕ್ಷ ರೂ. ದಂಡ: ಎಸ್ಪಿ

**ಕಳೆದ ಒಂದು ವಾರದಲ್ಲಿ ಜಿಲ್ಲೆಯಲ್ಲಿ 798 ಪ್ರಕರಣಗಳನ್ನು ದಾಖಲಿಸಿ 1,44,350 ರೂ. ದಂಡ ವಿಧಿಸಲಾಗಿದೆ ಎಂದು ಎಸ್ಪಿ ಹನುಮಂತರಾಯ ಹೇಳಿದರು.**

### ಕೋವಿಡ್ ಕೇರ್ ಸೆಂಟರ್ ಆರಂಭ

**ಜಿಲ್ಲಾಸ್ಪತ್ರೆ ಹಿಂಭಾಗದ ತರಬೇತಿ ಕೇಂದ್ರವನ್ನು ಕೋವಿಡ್ ಕೇರ್ ಸೆಂಟರ್ ಆಗಿ ಪರಿವರ್ತಿಸಲಾಗಿದೆ. ಅಗತ್ಯಬಿದ್ದರೆ ಜೆ.ಹೆಚ್. ಪಟೇಲ್ ಬಡಾವಣೆಯಲ್ಲಿರುವ ಹಾಸ್ಟೆಲ್ ಅನ್ನೂ ಕೋವಿಡ್ ಕೇರ್ ಸೆಂಟರ್‌ಗೆ ಪರಿವರ್ತಿಸಲಾಗುವುದು. ನಂತರ ಪ್ರತಿ ತಾಲ್ಲೂಕಿನಲ್ಲೂ ನಿರ್ಮಿಸಲು ಕ್ರಮ ಕೈಗೊಳ್ಳಲಾಗುವುದು.**
**ಈ ಹಿಂದೆ ಕೊರೊನಾ ನಿಭಾಯಿಸಿದ ಅನುಭವದ ಆಧಾರದ ಮೇಲೆ ಮುಂದೆಯೂ ನಿಯಂತ್ರಣಕ್ಕೆ ಶ್ರಮಿಸುವುದಾಗಿ ಜಿಲ್ಲಾಧಿಕಾರಿ ಹೇಳಿದರು.**



## ಎಲ್ಲೆಡೆ ರಾಮ ನವಮಿ

### ಕೊರೊನಾ ಹಿನ್ನೆಲೆ ಕುಂದಿದ ಸಂಭ್ರಮ

ದಾವಣಗೆರೆ, ಏ.21- ಕೊರೊನಾ ಎರಡನೇ ಅಲೆಯ ಏರಿಕೆಯ ಕರಿ ನೆರಳು ಇಂದಿನ ಶ್ರೀರಾಮ ನವಮಿ ಸಂಭ್ರಮದ ಮೇಲೆ ಬಿದ್ದಿತ್ತು. ಶ್ರೀರಾಮನ ದೇವಸ್ಥಾನಗಳಲ್ಲಿ ರಾಮನವಮಿ ಸಂಭ್ರಮ ಕಳೆ ಕುಂದಿತ್ತು. ದೇವರ ದರ್ಶನಕ್ಕೆ ದೇವಸ್ಥಾನಕ್ಕೆ ಆಗಮಿಸುವ ಭಕ್ತರ ಸಂಖ್ಯೆ ಬೆಳಗ್ಗೆ ಸಮಯದಲ್ಲೇ ವಿರಳವಾಗಿದ್ದು ಕಂಡು ಬಂತು.

ಕೆಲವರು ಮನೆಯಲ್ಲೇ ಶ್ರೀರಾಮ ನವಮಿ ಪ್ರಯುಕ್ತ ರಾಮ ನಾಮ ಸ್ಮರಣೆಯೊಂದಿಗೆ ಆರಾಧಿಸಿದ್ದಾರೆ. ಪಾನಕ, ಕೋಸುಂಬರಿ ಪ್ರಸಾದ ತಯಾರಿಸಿ ಸೇವಿಸಿದ್ದಾರೆ.

ನಗರದ ಶ್ರೀರಾಮನ ದೇವಸ್ಥಾನಗಳಲ್ಲಿ ಪಂಚಾಮೃತ ಅಭಿಷೇಕ ಸೇರಿದಂತೆ ವಿಶೇಷ ಪೂಜಾ ಕೈಂಕರ್ಯಗಳು ಸರಳವಾಗಿ ನೆರವೇರಿವೆ. ತೊಟ್ಟಿಲು ಪೂಜೆ ಸಹ ಸಾಂಗವಾಗಿ ನೆರವೇರಿತು. ಕೊರೊನಾ ಹಿನ್ನೆಲೆಯಲ್ಲಿ ಈ ಬಾರಿ ಪಾನಕ, ಕೋಸುಂಬರಿ ಪ್ರಸಾದ ವಿನಿಯೋಗ ಕಂಡುಬರಲಿಲ್ಲ.

ಪಿಜೆ ಬಡಾವಣೆಯಲ್ಲಿನ ಶ್ರೀರಾಮ ದೇವಸ್ಥಾನದಲ್ಲಿ ಶ್ರೀರಾಮ ದೇವರಿಗೆ ವಿಶೇಷ ಪೂಜೆ ಜೊತೆಗೆ ತುಳಸಿ, ಹೂವಿನ ಅಂಕಾರ ಮಾಡಲಾಗಿತ್ತು. ದೇವಸ್ಥಾನದ ಒಳಗೆ ಪ್ರವೇಶವನ್ನು ನಿಷೇಧಿಸಲಾಗಿತ್ತು. ಪ್ರವೇಶ (3ನೇ ಪುಟಕ್ಕೆ)

### ಕೊವಿಶೀಲ್ಡ್‌ನ ಲಸಿಕೆ ಹೊಸ ದರ ನಿಗದಿ

ನವದೆಹಲಿ, ಏ. 21 - ಸೆರಮ್ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾ ತನ್ನ ಕೊವಿಶೀಲ್ಡ್ ಲಸಿಕೆಗೆಯ ಬೆಲೆಯನ್ನು ರಾಜ್ಯಗಳಿಗೆ ಪ್ರತಿ ಡೋಸ್‌ಗೆ 400 ರೂ. ಹಾಗೂ ಖಾಸಗಿ ಆಸ್ಪತ್ರೆಗಳಿಗೆ 600 ರೂ.ಗಳೆಂದು ನಿಗದಿಪಡಿಸಿದೆ. ಪ್ರಸಕ್ತ (3ನೇ ಪುಟಕ್ಕೆ)

### ಜಿಲ್ಲೆಯಲ್ಲಿಯೇ ವಾಸ್ತವ್ಯ ಮಾಡಿ: ಬಿಎಸ್‌ವೈ ಪತ್ರ

ಬೆಂಗಳೂರು, ಏ.21 - ಮಾನ್ಯ ಮುಖ್ಯ ಮಂತ್ರಿಗಳು ಸಚಿವ ಸಂಪುಟದ ಸಹೋ ದ್ಯೋಗಿಗಳಿಗೆ ಪತ್ರ ಬರೆದಿದ್ದು ಕೋವಿಡ್ ಸಾಂಕ್ರಾಮಿಕ ರೋಗವನ್ನು ತಡೆಗಟ್ಟಲು ಉಸ್ತುವಾರಿ ಜಿಲ್ಲೆಯಲ್ಲಿಯೇ ವಾಸ್ತವ್ಯ ಮಾಡಿ ಪರಿಸ್ಥಿತಿ ಅವಲೋಕಿಸಿ ತ್ವರಿತ ಕ್ರಮ ಕೈಗೊಳ್ಳುವಂತೆ ಸೂಚನೆ ನೀಡಿದ್ದಾರೆ.

### ಕೆಪಿಎಸ್ಸಿ ಪರೀಕ್ಷೆಗಳ ಮುಂದೂಡಿಕೆ


ಬೆಂಗಳೂರು,ಏ.21- ಕೋವಿಡ್ ಹಿನ್ನೆಲೆಯಲ್ಲಿ ಕರ್ನಾಟಕ ಲೋಕಸೇವಾ ಆಯೋಗ ಏ. 22 ರಿಂದ 30 ರವರೆಗೆ ನಡೆಸಬೇಕಿದ್ದ ಇಲಾಖಾ ಪರೀಕ್ಷೆಗಳನ್ನು ತಾತ್ಕಾಲಿಕ ಮುಂದೂಡಿಲಾಗಿದೆ. ಪರೀಕ್ಷಾ ದಿನಾಂಕಗಳನ್ನು ಮುಂದಿನ ದಿನಗಳಲ್ಲಿ ಆಯೋಗ ಪ್ರಕಟಿಸಲಿದೆ.

# ಆಕ್ಸಿಜನ್ ಕೊರತೆಯಿಂದ ಕಂಗಾಲು

## ಟ್ಯಾಂಕರ್‌ಗಳಿಗೆ ಪೊಲೀಸ್ ಭದ್ರತೆ ಕಲ್ಪಿಸಲು ಉತ್ತರ ಪ್ರದೇಶದ ನಿರ್ಧಾರ

ನವದೆಹಲಿ, ಏ. 21 – ದೇಶದಲ್ಲಿ ಒಂದೇ ದಿನ ಸುಮಾರು ಮೂರು ಲಕ್ಷದಷ್ಟು ಕೊರೊನಾ ಸೋಂಕಿತರು ಕಂಡು ಬಂದ ಬೆನ್ನಲ್ಲೇ, ಸಾವಿರಾರು ಆಸ್ಪತ್ರೆಗಳಲ್ಲಿ ಆಕ್ಸಿಜನ್ ಕೊರತೆ ತಾರಕಕ್ಕೇರಿದೆ. ಈ ನಡುವೆಯೇ, ಮಹಾರಾಷ್ಟ್ರದ ಆಸ್ಪತ್ರೆಯೊಂದರಲ್ಲಿ ಆಕ್ಸಿಜನ್ ಸಿಲಿಂಡರ್ ಸೋರಿಕೆಯಾಗಿ 24 ಜನ ಸಾವನ್ನಪ್ಪಿದ ಘಟನೆಯೂ ನಡೆದಿದೆ.

ದೇಶದಲ್ಲಿ 7,500 ಮೆಟ್ರಿಕ್ ಟನ್ ಆಕ್ಸಿಜನ್ ಪ್ರತಿದಿನ ಉತ್ಪಾದನೆಯಾಗುತ್ತಿದೆ. ಇದರಲ್ಲಿ 6,600 ಮೆಟ್ರಿಕ್ ಟನ್ ಆಕ್ಸಿಜನ್ ಅನ್ನು ವೈದ್ಯಕೀಯ ಬಳಕೆಗಾಗಿ ರಾಜ್ಯಗಳಿಗೆ ಕಳಿಸಲಾಗುತ್ತಿದೆ ಎಂದು ಕೇಂದ್ರ ಆರೋಗ್ಯ



**ಆಕ್ಸಿಜನ್ ಸಿಲಿಂಡರ್ ಸೋರಿಕೆಯಾಗಿ 24 ಸಾವು**

ಕಾರ್ಯದರ್ಶಿ ರಾಜೇಶ್ ಭೂಷಣ್ ತಿಳಿಸಿದ್ದಾರೆ.

ಆಕ್ಸಿಜನ್ ಕೊರತೆ ಎದುರಿಸುತ್ತಿರುವ ದೆಹಲಿ, ಹರಿಯಾಣ, ಪಂಜಾಬ್, ರಾಜಸ್ಥಾನ ಹಾಗೂ ಮಹಾರಾಷ್ಟ್ರ ಸರ್ಕಾರಗಳು ಆರೋಪ – ಪ್ರತ್ಯಾರೋಪದಲ್ಲಿ ತೊಡಗಿವೆ. ರಾಜಧಾನಿಯ ಸರ್ ಗಂಗಾ ರಾಮ್, ಸೆಂಟ್ ಸ್ಟೀಫನ್ ಹಾಗೂ ಹೋಲಿ ಫ್ಯಾಮಿಲಿ ಆಸ್ಪತ್ರೆ ಸೇರಿದಂತೆ ಹಲವಾರು ಆಸ್ಪತ್ರೆಗಳಲ್ಲಿ ಒಂದೆರಡು ಗಂಟೆಗಳಿಗೆ ಆಗುವಷ್ಟು ಮಾತ್ರ ಆಕ್ಸಿಜನ್ ಉಳಿದಿತ್ತು. ನಂತರ ಹೇಳಿಕೆ ನೀಡಿದ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್, ಕೇಂದ್ರ ಸರ್ಕಾರ ದೆಹಲಿಯ ಆಕ್ಸಿಜನ್ ಕೋಟಾ ಹೆಚ್ಚಿಸಿದೆ ಎಂದು ತಿಳಿಸಿದ್ದಾರೆ.

ಈ ನಡುವೆ ಹೇಳಿಕೆ ನೀಡಿರುವ ಹರಿಯಾಣದ ಆರೋಗ್ಯ ಸಚಿವ ಅನಿಲ್ ವಿಜ್, ತಮ್ಮ ರಾಜ್ಯದಲ್ಲಿ ಹೆಚ್ಚುವರಿ ಆಕ್ಸಿಜನ್ ಇದ್ದರೆ (2ನೇ ಪುಟಕ್ಕೆ)




**ಬಿಲ್ಡಿಂಗ್ ಬಾಡಿಗೆಗಿದೆ**
ಚಾಮರಾಜಪೇಟೆ ಸರ್ಕಲ್ ಹತ್ತಿರ, ಕಲ್ಲೇಶ್ವರ ಕಿರಾಣಿ ಅಂಗಡಿ ಮೇಲ್ಭಾಗದಲ್ಲಿ 3 ಮಹಡಿ ಇರುವ 10,000 ಚದುರ ಅಡಿ ವಿಶಾಲವಾದ ಜಾಗ ಇರುವ ಬಿಲ್ಡಿಂಗ್ ಬಾಡಿಗೆಗಿದೆ. ಸಂಪರ್ಕಿಸಿ :
ಮೊ. : 98453 17181

**ಶಾಮನೂರು ಹತ್ತಿರ ಡಾಲರ್ಸ್ ಕಾಲೋನಿಯಲ್ಲಿ ಸೈಟ್‌ಗಳು ಮಾರಾಟಕ್ಕಿವೆ**
50x80 North 40 ಅಡಿ ರೋಡಿಗಿದೆ, 40x60 Corner, 30x50 North, 30x50 west, 30x45 East
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಜೈ ಶ್ರೀಮನ್ನಾರಾಯಣ**
ವಿಕಾಸ ತರಂಗಿಣಿ, ದಾವಣಗೆರೆ
25ನೇ ವರ್ಷದ
**ಉಚಿತ ಮಜ್ಜಿಗೆ ವಿತರಣೆ ಕಾರ್ಯಕ್ರಮ**
ಏಪ್ರಿಲ್ 1 ರಿಂದ ಮೇ 15ರವರೆಗೆ.
ಸ್ಥಳ : ಮಹಾನಗರ ಪಾಲಿಕೆ ಆವರಣ
*ಇಂದಿನ ಮಜ್ಜಿಗೆ ಪ್ರಾಯೋಜಕರು :*
ದಿ.ಅಂದನೂರು ಅಡಿವೆಪ್ಪನವರು ಮತ್ತು ಅಂದನೂರು ಕೊಟ್ರಬಸಪ್ಪನವರು ಇವರ ಜ್ಞಾಪಕಾರ್ಥವಾಗಿ ಅಂದನೂರು ಬಸವರಾಜಪ್ಪ, ಜ್ಯೋತಿ ಗ್ಯಾಸ್ ಏಜೆನ್ಸೀಸ್, ಪಿ.ಬಿ. ರಸ್ತೆ, ದಾವಣಗೆರೆ.ಇವರ ಸೇವಾರ್ಥ

**ಮೆಡಿಸಿನ್ ಬಾಕ್ಸ್ ಕಳೆದಿದೆ**
ದಿನಾಂಕ 21.4.2021 ರಂದು ಬುಧವಾರ ರಾಣೇಬೆನ್ನೂರಿನಿಂದ ದಾವಣಗೆರೆ ಕ್ರೂಸರ್ ಟೂಫಾನ್ ಗಾಡಿಯ ಮೇಲಿಟ್ಟಿದ್ದ ಮೆಡಿಸಿನ್ ಬಾಕ್ಸ್ NH-4 ರಸ್ತೆಯಲ್ಲಿ ಬಿದ್ದು ಕಳೆದುಹೋಗಿರುತ್ತದೆ. ಇದರಲ್ಲಿ ಮೆಡಿಸಿನ್ ಗಳು ಇರುವುದರಿಂದ ಯಾರಿಗಾದರೂ ಸಿಕ್ಕಲ್ಲಿ ಬಾಕ್ಸ್ ಮೇಲಿರುವ ನಂಬರಿಗಾಗಲೀ ಅಥವಾ ಈ ಕೆಳಗಿನ ಫೋನ್ ನಂಬರಿಗಾಗಲೀ ತಿಳಿಸಬೇಕಾಗಿ ವಿನಂತಿ
ರಾಜ್‌ಸನ್ಸ್ ಪ್ರೈಲಿ, ಮೆಡಿಕಲ್ ಸ್ಟೋರ್ ರಾಣೇಬೆನ್ನೂರು.
90601 72745

**ಸೈಟ್‌ಗಳು ಮಾರಾಟಕ್ಕಿವೆ**
ವಿದ್ಯಾನಗರ ಲಾಸ್ಟ್ ಬಸ್ ಸ್ಟಾಪ್ ದಾಟಿ ಹೊಸ ಬನಶಂಕರಿ ಲೇಔಟ್‌ನಲ್ಲಿ ಸೈಟ್‌ಗಳು ಮಾರಾಟಕ್ಕಿವೆ. 30x50, 30x50 west ಅಕ್ಕ-ಪಕ್ಕ, 30x58, 30x58 East ಅಕ್ಕ-ಪಕ್ಕ, 30x40 west 40 ಅಡಿ ರೋಡಿಗಿದೆ.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಕಲ್ಯಾಣ ಮಂಟಪ, ಕಾಲೇಜಿಗೆ ಯೋಗ್ಯ ಸ್ಥಳ ಮಾರಾಟಕ್ಕಿದೆ**
ಶಿವ ಪಾರ್ವತಿ ಬಡಾವಣೆಯಲ್ಲಿ 110 ಅಡಿ ರಿಂಗ್ ರೋಡ್‌ನಲ್ಲಿ ಮತ್ತು ಸರ್ಕಲ್‌ನಲ್ಲಿ 210x130 ಸೈಟು ಮಾರಾಟಕ್ಕಿದೆ.
ಮಾಸ್ಕ್ ಹಾಕಿ ಕೊರೊನಾ ಓಡಿಸಿ. ಸೈಟುಗಳಿಗೆ ಸಂಪರ್ಕಿಸಿ
ಐಗೂರು ಬಿ.ಆರ್. ವಿಜಯ್ ಕುಮಾರ್
99457 02495
ಸುರೇಶ್ 95911 60520

**ಬಿಲ್ಡಿಂಗ್ ಪೇಂಟಿಂಗ್**
ಹೊಸ ಮತ್ತು ಹಳೆ ಮನೆಗಳಿಗೆ. ಆಫೀಸ್, ಕಮರ್ಷಿಯಲ್ ಬಿಲ್ಡಿಂಗ್ ಫ್ಯಾಕ್ಟರಿ, ಗೋಡೌನ್‌ಗಳಿಗೆ ಕಡಿಮೆ ಖರ್ಚಿನಲ್ಲಿ ಗುಣಮಟ್ಟದ ಪೇಂಟಿಂಗ್ ಮಾಡಿಕೊಡಲಾಗುವುದು.
Mob: 95913 10082

**ಮನೆಗಳು ಮಾರಾಟಕ್ಕಿವೆ**
ಎಸ್.ಎಸ್.ಹೈಟೆಕ್ ಪಶ್ಚಿಮ 30x50, ಸರಸ್ವತಿ ಬಡಾವಣೆ ಪಶ್ಚಿಮ, 20x30 ಮೇಲೆ ಕೆಳಗೆ, ಡಿ.ಸಿ.ಎಂ ಲೇಔಟ್ ಪಶ್ಚಿಮ 30x40 ಕೆಳಗೆ ಒಂದು ಮನೆ ಮೇಲೆ ಡುಪ್ಲೆಕ್ಸ್.
ವ್ಯಾಕ್ಸಿನ್ ಹಾಕಿಸಿ ಕೊರೊನಾ ಓಡಿಸಿ
ಸುರೇಶ್ 95911 60520
ಐಗೂರು ಬಿ.ಆರ್. ವಿಜಯ್ ಕುಮಾರ್
99457 02495

**ಸೈಟ್‌ಗಳು ಮಾರಾಟಕ್ಕಿವೆ**
ವಿನಾಯಕ ಬಡಾವಣೆಯಲ್ಲಿ 30x40 ದಕ್ಷಿಣ, ಶಿವ ಪಾರ್ವತಿ ಬಡಾವಣೆಯಲ್ಲಿ 30x48 ಪೂರ್ವ, 30x48 ಪಶ್ಚಿಮ, ಬನಶಂಕರಿ ಬಡಾವಣೆಯಲ್ಲಿ 40x33 ಪಶ್ಚಿಮ, ಸ್ವಾಮಿ ವಿವೇಕಾನಂದ ಬಡಾವಣೆಯಲ್ಲಿ 30x50 ಉತ್ತರ.
ಸ್ವಾಮಿ ಏಜೆಂಟ್ ವಿದ್ಯಾನಗರ
97421 44715

**ಜಮೀನು ಮಾರಾಟಕ್ಕಿದೆ**
ದಾವಣಗೆರೆಯಿಂದ 5 ಕಿ. ಮೀ. ಹತ್ತಿರ ಪುಟಗನಾಳ್ ಗ್ರಾಮಕ್ಕೆ ಹೊಂದಿಕೊಂಡಂತೆ ಒಂದೂವರೆ ಎಕರೆ ನೀರಾವರಿ ಜಮೀನು ಮಾರಾಟಕ್ಕಿದೆ. ಎಕರೆಗೆ 37 ಲಕ್ಷ ರೂಪಾಯಿ ಆಗುತ್ತದೆ. ಸಂಪರ್ಕಿಸಿ :
ಮೊ: 98457 05871
63632 42625

**2 BHK House For Lease/Rent**
# 1430 LIC Colony, near Nutana College.
Contact :
90089 52333
73382 43777

**ಮನೆ ಬಾಡಿಗೆಗೆ ಇದೆ**
ಮೊದಲನೆ ಮಹಡಿ, ಡಬಲ್ ಬೆಡ್ ರೂಂ, ನೀರಿನ ಅನುಕೂಲವಿದೆ. #1700, ಕೆಟಿಜೆ ನಗರ, 18ನೇ ಕ್ರಾಸ್, ಕೆಇಬಿ ಎದುರು, ಸಿದ್ಧಗಂಗಾ ಸ್ಕೂಲ್ ಹತ್ತಿರ, ದಾವಣಗೆರೆ.
76765 50352, 98447 07722

**ಬೇಕಾಗಿದ್ದಾರೆ**
ಮೆಡಿಕಲ್ ಶಾಪ್‌ನಲ್ಲಿ ಬಿ.ಎ. ಅಥವಾ ಇತರೆ ವಿಷಯಗಳಲ್ಲಿ ಅನುಭವವಿರುವ ಓರ್ವ ಹಾಗೂ ಮೆಡಿಕಲ್ ಸ್ಟೋರ್‌ನಲ್ಲಿ ಔಷಧಿ ವಿತರಣೆಯಲ್ಲಿ ಅನುಭವವಿರುವ ಇಬ್ಬರು ಬೇಕಾಗಿದ್ದಾರೆ. ಸಂಪರ್ಕಿಸಿ
97434 47076
70192 49897

**ಪ್ರವೇಶ ಪ್ರಕಟಣೆ**
ಕರೆಸ್ಪಾಂಡೆನ್ಸ್/ ರೆಗ್ಯೂಲರ್
SSLC, PUC, BA, BCom, BSc, MA, MCom, MSc, MBA, All PG & Diploma Courses
S.S. Global Institute for Higher Education, Davanagere.
63619 00533, 72593 59861

**M R VENTURES**
ಹೊರ ಗುತ್ತಿಗೆ ಆಧಾರದಲ್ಲಿ ಎಲ್ಲಾ ರೀತಿಯ ಮ್ಯಾನ್ ಪವರ್ ಸಪ್ಲೈ ಮಾಡಲಾಗುವುದು. ಪ್ರತಿಯೊಂದು ಸೌಲಭ್ಯ ನೀಡಲಾಗುವುದು. ಸಂಪರ್ಕಿಸಿ.
9036921415

**Wanted Experience Gents Lecturers**

| | |
|---|---|
| Subjects :Economics | - 03 |
| Accountancy | - 03 |
| Business studies | - 03 |
| Statistics | - 03 |

94497 02778, 94819 09493

**ಸೈಟು ಮಾರಾಟಕ್ಕಿದೆ**
ಹಾರ್ಟ್ ಹಾಸ್ಪಿಟಲ್ ರೋಡ್, ಎಂ.ಸಿ.ಸಿ 'ಬಿ' ಬ್ಲಾಕ್, 47×60 ಅಡಿ (ಪೂರ್ವ)
ಮೋಹನ್ಸ್ ರಿಯಲ್ ಎಸ್ಟೇಟ್ ಏಜೆನ್ಸೀಸ್
ಮೊ. : 97424 34049

**ಭದ್ರಾ ನ್ಯಾಚರಲ್**
ದಾವಣಗೆರೆ ರಾಂ ಅಂಡ್ ಕೋ ಸರ್ಕಲ್ ಮೆಡ್ ಪ್ಲೆಸ್ ಎದುರಿಗಿರುವ ಭದ್ರಾ ನ್ಯಾಚುರಲ್ಸ್ (ಸಾವಯವ/ ನೈಸರ್ಗಿಕ ಆಹಾರ ದಿನಸಿ ಒಂದೇ ಸೂರಿನಡಿ) ವ್ಯವಹಾರದ ಸಮಯ ಬೆಳಗ್ಗೆ 10 ರಿಂದ ರಾತ್ರಿ 9ರ ವರೆಗೆ ಶನಿವಾರ ಮತ್ತು ಭಾನುವಾರ ಬೆಳಗ್ಗೆ 6 ರಿಂದ 10ರವರೆಗೆ. ಮೆಳ್ಳೇಕಟ್ಟೆ ಬಸವರಾಜಪ್ಪ
94483 23796, 91646 76826

**ಮಾರಾಟಕ್ಕಿದೆ**
ಪ್ರಸಿದ್ದ ಏರಿಯಾದ ಮುಖ್ಯ ರಸ್ತೆಯಲ್ಲಿ 8 ವರ್ಷಗಳಿಂದ ನಡೆಸಿಕೊಂಡು ಬಂದಿರುವ ಸುಸಜ್ಜಿತವಾದ ಸೂಪರ್ ಮಾರ್ಕೆಟ್ ಮಾರಾಟಕ್ಕೆ ಇದೆ.
ಫೋ. : 90086 40109

**ಡ್ರೈವರ್ ಬೇಕಾಗಿದ್ದಾರೆ**
ಕೋರಿಯರ್ ಕಂಪನಿಯಲ್ಲಿ TATA ACE ನಡೆಸಲು ಡ್ರೈವರ್‌ಗಳು ಬೇಕಾಗಿದ್ದಾರೆ. ಕೂಡಲೇ ಸಂಪರ್ಕಿಸಿ
91139 65957
91641 60172

**ನೀರಿನ ಲೀಕೇಜ್**
(ವಾಟರ್ ಪ್ರೂಫಿಂಗ್)
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
ಮೊ. 9538777582
ಕೆಲಸ 100% ಗ್ಯಾರಂಟಿ.

**ಸಾಲಗಳಿಗೆ ಸಂಪರ್ಕಿಸಿ**
(ಬಡ್ಡಿ ದರ ವಾರ್ಷಿಕ 7% ರಿಂದ ಪ್ರಾರಂಭ)
ಮನೆ ಕಟ್ಟಲು, ಮನೆ ಖರೀದಿ, ಸೈಟ್ ಖರೀದಿ, ಕಟ್ಟಿರುವ ಮನೆಗೆ ಸಾಲ, ಬೇರೆ ಬ್ಯಾಂಕ್‌ನಲ್ಲಿ ತೆಗೆದುಕೊಂಡಿರುವ ಸಾಲ ವರ್ಗಾವಣೆ ಮತ್ತು ಅಧಿಕ ಸಾಲಕ್ಕಾಗಿ ಸಂಪರ್ಕಿಸಿ.
(ಸಂಬಳ ಮತ್ತು ವ್ಯವಹಾರದಾರರಿಗೆ ಮಾತ್ರ)
73385 80345

**House To-Let**
2BHK 'Santrupthi'
# 1640/66-67, Saraswati Badavane, Davanagere.
Veg only
94484 46708

**Contact for ID's**
We undertake All Shops, Society, Enterprises, Firms, Hospitals, Nursing Homes, Private Sector & all other Identity cards (except Voter ID & Govt. ID's)
Contact :
78924 66642, 94499 83365

**ಮಳಿಗೆ / ಮನೆಗಳು ಬಾಡಿಗೆಗೆ / ಲೀಸ್‌ಗಿವೆ**
3BHK ಗ್ರೌಂಡ್ ಫ್ಲೋರ್ ಮನೆ ಮತ್ತು ಮಳಿಗೆ, 2BHK 1 ಮತ್ತು 2ನೇ ಮಹಡಿ ಸುಸಜ್ಜಿತ ಮನೆಗಳು ಬಸವೇಶ್ವರ ಬಡಾವಣೆ ಮುಖ್ಯ ರಸ್ತೆಗೆ ಹೋಟೆಲ್ ಸಾಯಿ ಇಂಟರ್ ನ್ಯಾಷನಲ್ ಹಿಂಭಾಗ, ದಾವಣಗೆರೆ ಇಲ್ಲಿ ಬಾಡಿಗೆಗೆ / ಲೀಸ್‌ಗಿವೆ ಸಂಪರ್ಕಿಸಿ
9844132621, 9448113829
9740590797

**ಸೊಳ್ಳೆ ಮೆಶ್ ಹಾಕಲಾಗುವುದು**
ನಮ್ಮಲ್ಲಿ ಎಲ್ಲಾ ತರಹದ ಕುಷನ್ ವರ್ಕ್ಸ್, ಸೋಫಾಸೆಟ್, ಡ್ಯುರೋಫ್ಲೆಕ್ಸ್ ಬೆಡ್, ಕಿಟಕಿಗೆ ಅಲ್ಯೂಮಿನಿಯಂ ಡೋರ್, ಸೊಳ್ಳೆ ಮೆಶ್ ಹಾಕಲಾಗುವುದು.
SWAPNA CUSHION WORK
Behind Vittal Temple, Maharaj Pet, Davanagere.
98445 81966


**EXNG OFFER**
ನಮ್ಮಲ್ಲಿ ಸೋಫಾ, ಕುಷನ್, Sponge Bed, ಪಾಲಿಶ್ ವುಡ್ ಮಾಡುತ್ತವೆ. ಎಲ್ಲಾ ರೀತಿ Furniture ರಿಪೇರಿ ಸಹ ಮಾಡುತ್ತೇವೆ.
74308 88761

**ತಕ್ಷಣ ಬೇಕಾಗಿದ್ದಾರೆ**
ಸ್ಯಾಮ್ಸನ್ ಡಿಸ್ಟಿಲರೀಸ್, ದುಗ್ಗಾವತಿ ಹಾಗೂ SS ಆಸ್ಪತ್ರೆ, ಬಾಪೂಜಿ ಆಸ್ಪತ್ರೆ ಹಾಗೂ ದಾವಣಗೆರೆ ಸುತ್ತಮುತ್ತಲು 8 ಗಂಟೆ ಹಾಗೂ 12 ಗಂಟೆ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್ಸ್ ತಕ್ಷಣ ಬೇಕಾಗಿದ್ದಾರೆ. ESI-PF ಸೌಲಭ್ಯ ಇರುತ್ತದೆ.
ಅಸೋಸಿಯೇಟೆಡ್ ಎಂಟರ್ ಪ್ರೈಸಸ್, ದಾವಣಗೆರೆ.
99169 29713, 90605 45500, 97390 89022

**ಬೇಕಾಗಿದ್ದಾರೆ**
ಕ್ಯಾಷಿಯರ್-1, ಸೇಲ್ಸ್ ಗರ್ಲ್ಸ್ - 5, ಸೇಲ್ಸ್ ಬಾಯ್ಸ್ -5 ಕ್ಲೀನಿಂಗ್-1
ಸಂಪರ್ಕಿಸಿ:
ಗಂಗಾವತಿ ಸಿಲ್ಕ್ ಸ್ಯಾರಿ ಸೆಂಟರ್
ಬಿನ್ನಿ ಕಂಪನಿ ರೋಡ್, ದಾವಣಗೆರೆ.


**ಬೇಕಾಗಿದ್ದಾರೆ**
ವಿದ್ಯಾನಗರದಲ್ಲಿ ಮನೆ ಕೆಲಸ ಮಾಡಲು ಬೇಕಾಗಿದ್ದಾರೆ. ಆಕರ್ಷಕ ವೇತನ. ಲಿಂಗಾಯಿತ ಮಹಿಳೆಯರಿಗೆ ಆದ್ಯತೆ. ಸಂಪರ್ಕಿಸಿ
ಮೊ. : 98808 53626


**ಕುಣೆಬೆಳಕೆರೆ ಮಡಿವಾಳರ ಕರಿಯಪ್ಪ ನಿಧನ**



ಹರಿಹರ ತಾಲ್ಲೂಕು ಕುಣೆಬೆಳಕೆರೆ ಗ್ರಾಮದ ವಾಸಿ, ಕುಣೆಬೆಳಕೆರೆ ವಿ.ಎಸ್. ಎಸ್.ಎನ್ ಸದಸ್ಯರಾದ ಮಡಿವಾಳರ ಕರಿಯಪ್ಪ (85) ಇವರು ದಿನಾಂಕ 21.4.2021 ರ ಬುಧವಾರ ಸಂಜೆ 6.20 ಕ್ಕೆ ನಿಧನರಾದರು. ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿ, ಮೊಮ್ಮಕ್ಕಳು ಹಾಗೂ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 22.4.2021 ರ ಗುರುವಾರ ಮಧ್ಯಾಹ್ನ 12.30 ಕ್ಕೆ ಸ್ವಗ್ರಾಮವಾದ ಹರಿಹರ ತಾಲ್ಲೂಕು ಕುಣೆಬೆಳಕೆರೆಯಲ್ಲಿ ನೆರವೇರಲಿದೆ.

**ಪುಟಗನಾಳು ಸಣ್ಣ ಭೀಮಪ್ಪ ನಿಧನ**



ದಾವಣಗೆರೆ ತಾಲ್ಲೂಕು ಪುಟಗನಾಳು ಗ್ರಾಮದ ವಾಸಿ ಕೆಂಚನಹಳ್ಳಿ ಪುಟಗನಾಳು ಸಣ್ಣ ಭೀಮಪ್ಪ (70) ಇವರು ದಿನಾಂಕ 21.04.2021 ರ ಬುಧವಾರ ಮಧ್ಯಾಹ್ನ 2.30ಕ್ಕೆ ನಿಧನರಾದರು. ಪತ್ನಿ, ಮೂವರು ಪುತ್ರರು, ಮೂವರು ಪುತ್ರಿಯರು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 22.4.2021ರ ಗುರುವಾರ ಮಧ್ಯಾಹ್ನ 12 ಗಂಟೆಗೆ ಪುಟಗನಾಳು ಗ್ರಾಮದಲ್ಲಿ ಮೃತರ ಸ್ವಂತ ಜಮೀನಿನಲ್ಲಿ ನೆರವೇರಲಿದೆ.

**ಮೆಡುಕುಂದ ಗಿರಿಧರ್ ನಿಧನ**



ದಾವಣಗೆರೆ ಎಸ್.ಎಸ್. ಲೇಔಟ್ 'ಬಿ' ಬ್ಲಾಕ್ ವಾಸಿ ಮೆಡುಕುಂದ ಗಿರಿಧರ್ (64) ಇವರು ದಿನಾಂಕ 21.04.2021 ರ ಬುಧವಾರ ಬೆಳಗ್ಗೆ 7.30ಕ್ಕೆ ನಿನರಾದರು. ಪತ್ನಿ, ಇಬ್ಬರು ಪುತ್ರರು, ಓರ್ವ ಪುತ್ರಿ, ಸೊಸೆಯಂದಿರು, ಅಳಿಯ ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 21.4.2021 ರ ಬುಧವಾರ ಮಧ್ಯಾಹ್ನ 4 ಗಂಟೆಗೆ ಸಾರ್ವಜನಿಕ ರುದ್ರಭೂಮಿಯಲ್ಲಿ ನೆರವೇರಿತು.

**ಮಾಗಾನಹಳ್ಳಿ ದೇವೀರಮ್ಮ ನಿಧನ**



ದಾವಣಗೆರೆ ಎಸ್.ಎಸ್. ಬಡಾವಣೆ 'ಎ' ಬ್ಲಾಕ್, IDFC ಬ್ಯಾಂಕ್ ಹಿಂಭಾಗದ ವಾಸಿ, ಶ್ರೀ ಮಾಗಾನಹಳ್ಳಿ ಕೊಟ್ರಪ್ಪ ಇವರ ಧರ್ಮಪತ್ನಿ **ಶ್ರೀಮತಿ ದೇವೀರಮ್ಮ** ಇವರು ದಿನಾಂಕ 21.04.2021ರ ಬುಧವಾರ ನಿಧನರಾದರು. ಮೃತರಿಗೆ 99 ವರ್ಷವಾಗಿತ್ತು. ಮೂವರು ಪುತ್ರರು, ಇಬ್ಬರು ಪುತ್ರಿಯರು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು, ಮರಿ ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 22.04.2021ರ ಗುರುವಾರ ಬೆಳಿಗ್ಗೆ 10 ಕ್ಕೆ ರಾಮನಗರದ ರುದ್ರಭೂಮಿಯಲ್ಲಿ ನೆರವೇರಲಿದೆ.

ಇಂತಿ ದುಃಖತಪ್ತರು,
ಮಾಗಾನಹಳ್ಳಿ ಚಂದ್ರಶೇಖರಪ್ಪ ಮತ್ತು ಸಹೋದರರು, ದಾವಣಗೆರೆ.
ಮೊ. : 99865 20981, 98806 42756

**ಟಿ.ಹೆಚ್. ವಿಜಯಕುಮಾರ್ ಹಂಪಾಳಿ ನಿಧನ**



ದಾವಣಗೆರೆ ಎಸ್.ಎಸ್. ಲೇಔಟ್ 'ಎ' ಬ್ಲಾಕ್, 1ನೇ ಮುಖ್ಯ ರಸ್ತೆ, 4ನೇ ಕ್ರಾಸ್, ಡೋ.ನಂ. 1669/73 ರ ವಾಸಿಗಳಾದ ಮೆಕ್ಕೆಜೋಳ ವ್ಯಾಪಾರಿ **ಟಿ.ಹೆಚ್. ವಿಜಯಕುಮಾರ್ ಹಂಪಾಳಿ** ಅವರು ದಿನಾಂಕ 21.4.2021ರ ಬುಧವಾರ ರಾತ್ರಿ 10.46ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ ಸುಮಾರು 65 ವರ್ಷ ವಯಸ್ಸಾಗಿತ್ತು. ಪತ್ನಿ, ಮೂವರು ಪುತ್ರರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 22.4.2021ರ ಗುರುವಾರ ಮಧ್ಯಾಹ್ನ 1 ಗಂಟೆಗೆ ರುದ್ರಭೂಮಿಯಲ್ಲಿ ನಡೆಯಲಿದೆ.

ದುಃಖತಪ್ತ ಕುಟುಂಬ ವರ್ಗ : ಮೊ. 98444-56190

# ನಿತ್ಯ 200 ಕೋವಿಡ್ ಲಸಿಕೆಗಳ ಪೂರೈಕೆಗೆ ಮನವಿ

ಮಲೇಬೆನ್ನೂರು, ಏ.21- ಪಟ್ಟಣದ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಜಿ.ಪಂ. ಸದಸ್ಯ ಹಾಗೂ ಬಿಜೆಪಿ ಮುಖಂಡ ಬಿ.ಎಂ. ವಾಗೀಶ್ ಸ್ವಾಮಿ ಅವರು ಇಂದು ಕೋವಿಡ್ ಲಸಿಕೆ ಹಾಕಿಸಿಕೊಂಡರು.

ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ವಾಗೀಶ್ ಸ್ವಾಮಿ, ಮಲೇಬೆನ್ನೂರು ಪಟ್ಟಣ ಪುರಸಭೆಯ ಜೊತೆಗೆ ಹೋಬಳಿ ಕೇಂದ್ರವೂ ಆಗಿರುವುದರಿಂದ ಇಲ್ಲಿನ ಸಮುದಾಯ ಆರೋಗ್ಯ ಕೇಂದ್ರಕ್ಕೆ ಈಗ ಕಳುಹಿಸುತ್ತಿರುವ ಲಸಿಕೆ ಸಾಕಾಗುತ್ತಿಲ್ಲ.

ಪ್ರತಿದಿನ ಕನಿಷ್ಠ 150 ರಿಂದ 200 ಜನರಿಗೆ ಆಗುವಷ್ಟು ಲಸಿಕೆ ಪೂರೈಸುವಂತೆ ಡಿಹೆಚ್‌ಓ ಡಾ. ಚಂದ್ರಮೋಹನ್ ಅವರನ್ನು ಫೋನ್ ಮೂಲಕ ಒತ್ತಾಯಿಸಿದರು.

ಈ ವಿಷಯವನ್ನು ಸಂಸದ ಜಿ.ಎಂ. ಸಿದ್ದೇಶ್ವರ್ ಅವರ ಗಮನಕ್ಕೆ ತಂದ ವಾಗೀಶ್ ಸ್ವಾಮಿ ಅವರು, ಗುರುವಾರದಿಂದ ಕನಿಷ್ಟ 150 ಜನರಿಗಾದರೂ ಲಸಿಕೆ ಹಾಕಿಸುವ ವ್ಯವಸ್ಥೆ ಆಗಲಿದೆ ಎಂದರು.



**1624 ಜನರಿಗೆ ಲಸಿಕೆ:** ಮಾರ್ಚ್ 8 ರಿಂದ ಇದುವರೆಗೆ ಸಮುದಾಯ ಆರೋಗ್ಯ ಕೇಂದ್ರದಲ್ಲಿ 1624 ಜನರಿಗೆ ಕೋವಿಡ್ ಲಸಿಕೆ ಹಾಕಲಾಗಿದ್ದು, ನಮಗೆ ಪ್ರತಿದಿನ ಕನಿಷ್ಟ 150 ಜನರಿಗೆ ಲಸಿಕೆಯ ಅವಶ್ಯಕತೆ ಇರುತ್ತದೆ.

ನಿನ್ನೆ ಮತ್ತು ಇಂದು 30 ಜನರಿಗೆ ಮಾತ್ರ ಲಸಿಕೆ ಬಂದಿದೆ. ಇದರಿಂದ ಲಸಿಕೆ ಹಾಕಿಸಿಕೊಳ್ಳಲು ಬಂದ ಜನರಿಗೆ ಸ್ವಲ್ಪ ತೊಂದರೆ ಆಗಿದೆ ಎಂದು ವೈದ್ಯಾಧಿಕಾರಿ ಡಾ. ಲಕ್ಷ್ಮಿದೇವಿ ತಿಳಿಸಿದರು.

ನಮ್ಮಲ್ಲಿ ಕೊರೊನಾ ಟೆಸ್ಟ್ ಆದವರ ಪೈಕಿ 2ನೇ ಅಲೆಯಲ್ಲಿ ಈವರೆಗೆ 9 ಜನರಿಗೆ ಪಾಸಿಟಿವ್ ಬಂದಿದೆ. ಬುಧವಾರ ಮಲೇಬೆನ್ನೂರು, ಹಾಲಿವಾಣ, ಹರಳಹಳ್ಳಿ ಗ್ರಾಮದ ತಲಾ ಒಬ್ಬರಿಗೆ ಸೋಂಕು ದೃಢಪಟ್ಟಿದೆ ಎಂದು ಡಾ. ಲಕ್ಷ್ಮಿದೇವಿ ಮಾಹಿತಿ ನೀಡಿದರು.

**ಮಲೇಬೆನ್ನೂರಿನಲ್ಲಿ ಜಿ.ಪಂ. ಸದಸ್ಯ ಬಿ.ಎಂ. ವಾಗೀಶ್ ಸ್ವಾಮಿ**

ಇದೇ ವೇಳೆ ಪುರಸಭೆ ಸದಸ್ಯರಾದ ಬಿ. ಸುರೇಶ್, ಬಿ.ಹೆಚ್. ಮಂಜಪ್ಪ, ಆಶ್ರಯ ಸಮಿತಿ ಸದಸ್ಯ ಬಿ. ಚಂದ್ರಪ್ಪ, ಆರೋಗ್ಯ ರಕ್ಷಾ ಸಮಿತಿ ಸದಸ್ಯ ಪಾನಿಪೂರಿ ರಂಗನಾಥ್ ಮತ್ತಿತರರು ಲಸಿಕೆ ಹಾಕಿಸಿಕೊಂಡರು.

ಪುರಸಭೆ ಅಧ್ಯಕ್ಷೆ ಶ್ರೀಮತಿ ಪಾನಿಪೂರಿ ರಂಗನಾಥ್, ಉಪಾಧ್ಯಕ್ಷೆ ಅಂಜಿನಮ್ಮ ವಿಜಯಕುಮಾರ್, ಸ್ಥಾಯಿ ಸಮಿತಿ ಅಧ್ಯಕ್ಷ ಮಹಾಲಿಂಗಪ್ಪ, ಮುಖ್ಯಾಧಿಕಾರಿ ದಿನಕರ್, ಸದಸ್ಯರಾದ ಮಹಾಂತೇಶ್ ಸ್ವಾಮಿ, ಪಿ.ಆರ್. ರಾಜು, ಎ.ಕೆ. ಲೋಕೇಶ್, ಆರೋಗ್ಯ ರಕ್ಷಾ ಸಮಿತಿ ಸದಸ್ಯರಾದ ಬಿ. ಮಂಜುನಾಥ್, ಎ.ಕೆ. ನಾಗರಾಜ್ ಇನ್ನಿತರರು ಹಾಜರಿದ್ದರು.

## ಜಿಲ್ಲಾ ಗಡಿಯಲ್ಲಿ ಚೆಕ್ ಪೋಸ್ಟ್

**(1ನೇ ಪುಟದಿಂದ)** ಕಂಡುಬಂದಿದೆ. ನಿಯಮ ಉಲ್ಲಂಘಿಸುವ ಅಂಗಡಿಗಳಿಗೆ ಹಾಗೂ ಕಲ್ಯಾಣ ಮಂಟಪಗಳಿಗೆ ದಂಡ ವಿಧಿಸಲಾಗುತ್ತಿದೆ. ಮುಂದಿನ ದಿನಗಳಲ್ಲಿ ಇನ್ನೂ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಜಿಲ್ಲಾಧಿಕಾರಿ ಹೇಳಿದರು.

**ಮದುವೆಗಳನ್ನು ಮುಂದೂಡಲು ಮನವಿ:** ಕೋವಿಡ್ ಎರಡನೇ ಅಲೆ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಸಾಧ್ಯವಾದಷ್ಟೂ ಮದುವೆಗಳನ್ನು ಮುಂದೂಡುವಂತೆ ಸಚಿವ ಭೈರತಿ ಸಾರ್ವಜನಿಕರಿಗೆ ಮನವಿ ಮಾಡಿದರು. ಮದುವೆಗೆ ಜನರನ್ನು ಕರೆಯುತ್ತೀರಿ, ಜನರೂ ಬರುತ್ತಾರೆ. ಅಲ್ಲಿ ಸೋಂಕು ಹರಡಿದರೆ ನಿಮಗೇ ಇರಿಸು-ಮುರಿಸು ಉಂಟಾಗುತ್ತದೆ ಎಂದರು. ಮನೆಯಿಂದ ಹೊರ ಹೋಗುವಾಗ ಕಡ್ಡಾಯವಾಗಿ ಮಾಸ್ಕ್ ಧರಿಸಬೇಕು. ಇಲ್ಲದಿದ್ದರೆ ಅಧಿಕಾರಿಗಳು ದಂಡ ವಿಧಿಸುತ್ತಾರೆ. ಆದಷ್ಟೂ ಸರ್ಕಾರದ ನಿಯಮಗಳನ್ನು ಪಾಲಿಸುವಂತೆ ಕೋರಿದರು.

ಬೆಂಗಳೂರಿನಲ್ಲಿ ಆಟೋಗಳ ಮೂಲಕ ಜನರಲ್ಲಿ ಜಾಗೃತಿ ಮೂಡಿ ಸುವ ಕೆಲಸ ಮಾಡುತ್ತಿದ್ದು, ದಾವಣಗೆರೆ ಯಲ್ಲಿಯೂ ಅದೇ ರೀತಿ ಕ್ರಮ ವಹಿಸುವಂತೆ ಸಚಿವರು ಸೂಚಿಸಿದರು.

ಸಂಸದ ಜಿ.ಎಂ. ಸಿದ್ದೇಶ್ವರ, ಶಾಸಕರುಗಳಾದ ಎಸ್.ಎ. ರವೀಂದ್ರನಾಥ್, ಎಸ್.ವಿ. ರಾಮಚಂದ್ರ, ಜಿ.ಪಂ. ಅಧ್ಯಕ್ಷೆ ಶಾಂತಕುಮಾರಿ, ಪಾಲಿಕೆ ಮೇಯರ್ ಎಸ್.ಟಿ. ವೀರೇಶ್, ಎಸ್ಪಿ ಹನುಮಂತರಾಯ, ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ. ರಾಘವನ್, ಜಿಲ್ಲಾ ಆರ್‌ಸಿಹೆಚ್ ಅಧಿಕಾರಿ ಡಾ. ಮೀನಾಕ್ಷಿ, ಜಿಲ್ಲಾ ಸರ್ಜನ್ ಡಾ. ಜಯಪ್ರಕಾಶ್, ಅಪರ ಜಿಲ್ಲಾಧಿಕಾರಿ ಪೂಜಾರ್ ವೀರಮಲ್ಲಪ್ಪ, ಉಪವಿಭಾಗಾಧಿಕಾರಿ ಮಮತಾ ಹೊಸಗೌಡರ್, ಪಾಲಿಕೆ ಆಯುಕ್ತ ವಿಶ್ವನಾಥ ಮುದಜ್ಜಿ ಸೇರಿದಂತೆ, ವಿವಿಧ ಇಲಾಖೆಗಳ ಅಧಿಕಾರಿಗಳು, ತಹಸೀಲ್ದಾರರು ಭಾಗವಹಿಸಿದ್ದರು.

**ತಾಲ್ಲೂಕು ಆರೋಗ್ಯ ಕೇಂದ್ರಕ್ಕೆ ಅನಿರೀಕ್ಷಿತ ಭೇಟಿ ನೀಡುವೆ**

ಜಿಲ್ಲೆಯಲ್ಲಿನ ತಾಲ್ಲೂಕು ಆರೋಗ್ಯ ಕೇಂದ್ರಗಳಿಗೆ ದಿಢೀರ್ ಭೇಟಿ ನೀಡುತ್ತೇನೆ. ಅಲ್ಲಿಯ ಜನತೆ ಏನಾದರೂ ದೂರುಗಳನ್ನು ನೀಡಿದರೆ ತಾಲ್ಲೂಕು ಆರೋಗ್ಯಾಧಿಕಾರಿಗಳ ಮೇಲೆ ಕಠಿಣ ಕ್ರಮ ತೆಗೆದುಕೊಳ್ಳುತ್ತೇನೆ ಎಂದು ಸಚಿವ ಭೈರತಿ ಬಸವರಾಜ್ ಎಚ್ಚರಿಸಿದರು.

ಕೋವಿಡ್ ನಿಯಂತ್ರಿಸುವಲ್ಲಿ ತಾಲ್ಲೂಕು ಆರೋಗ್ಯಾಧಿಕಾರಿಗಳ ಪಾತ್ರವೂ ಮಹತ್ವದ್ದು. ತಪಾಸಣೆ ಹಾಗೂ ಲಸಿಕೆ ವಿತರಣೆಯಲ್ಲಿ ನಿರ್ಲಕ್ಷ್ಯ ವಹಿಸಬೇಡಿ ಎಂದರು.

## ಗುರಿ ತಲುಪದ ಲಸಿಕೆ : ತರಾಟೆ

**(1ನೇ ಪುಟದಿಂದ)** ತರಾಟೆಗೆ ತೆಗೆದುಕೊಂಡ ಪರಿ ಇದು.

ಜಿಲ್ಲೆಯಲ್ಲಿ ನಿಗದಿತ ಗುರಿಯಂತೆ ಕೋವಿಡ್ ಲಸಿಕೆ ವಿತರಣೆಯಾಗಿಲ್ಲ ಎಂದು ಜಿಲ್ಲಾ ಉಸ್ತುವಾರಿ ಸಚಿವರು ಜಿಲ್ಲಾಧಿಕಾರಿ ಸೇರಿದಂತೆ ವೈದ್ಯಾಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು. ಜಿಲ್ಲೆಯಲ್ಲಿ 45 ವರ್ಷ ಮೇಲ್ಪಟ್ಟ 4.17 ಲಕ್ಷ ಜನರಿಗೆ ಲಸಿಕೆ ನೀಡುವ ಗುರಿಯ ಬದಲಿಗೆ 1.30 ಲಕ್ಷ ಜನರಿಗೆ ಮಾತ್ರ ಲಸಿಕೆ ನೀಡಲಾಗಿದ್ದು, ಕೇವಲ ಶೇ. 31 ರಷ್ಟು ಮಾತ್ರ ಸಾಧನೆಯಾಗಿರುವುದಕ್ಕೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದರು.

ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಮಾತನಾಡಿ, ಕಳೆದ ಮಾರ್ಚ್ 1 ರಿಂದ ಈವರೆಗೆ ಜಿಲ್ಲೆಯಲ್ಲಿ 15639 ಆರೋಗ್ಯ ಕಾರ್ಯಕರ್ತರು, 5384 ಜನ ಮುಂಚೂಣಿ ಕಾರ್ಯಕರ್ತರಿಗೆ ಲಸಿಕೆ ನೀಡಿದ್ದು, ಶೇ. 92 ರಷ್ಟು ಸಾಧನೆಯಾಗಿದೆ. 45 ವರ್ಷ ಮೇಲ್ಪಟ್ಟ 4,17,428 ಜನರಿಗೆ ಲಸಿಕೆ ನೀಡುವ ಗುರಿಗೆ ಈವರೆಗೆ 1,30,793 ಜನರಿಗೆ ಲಸಿಕೆ ನೀಡಿದ್ದು ಶೇ. 31 ರಷ್ಟು ಸಾಧನೆಯಾಗಿದೆ ಎಂದು ಹೇಳಿದರು. ಆರಂಭದ ದಿನಗಳಲ್ಲಿ ಜನರು ಲಸಿಕೆ ಪಡೆಯಲು ಹಿಂದೇಟು ಹಾಕುತ್ತಿದ್ದರು. ಆದರೆ ಇದೀಗ ಜಿಲ್ಲೆಯ ಎಲ್ಲ ಜನಪ್ರತಿನಿಧಿಗಳು, ಉನ್ನತ ಅಧಿಕಾರಿಗಳು ಲಸಿಕೆ ಪಡೆದು ಜನರಲ್ಲಿದ್ದ ತಪ್ಪು ಕಲ್ಪನೆಗಳನ್ನು ತೊಡೆದುಹಾಕಿದ್ದಾರೆ. ಹೀಗಾಗಿ ಜನರು ಇದೀಗ ಸ್ವಯಂ ಪ್ರೇರಣೆಯಿಂದ ಲಸಿಕೆ ಪಡೆಯಲು ಮುಂದೆ ಬರುತ್ತಿದ್ದಾರೆ. ಬರುವ ದಿನಗಳಲ್ಲಿ ಲಸಿಕೆ ಅಭಿಯಾನವನ್ನು ಇನ್ನಷ್ಟು ಪರಿಣಾಮಕಾರಿಯಾಗಿ ಕೈಗೊಳ್ಳಲಾಗುವುದು ಎಂದರು.

ಸಂಸದ ಜಿ.ಎಂ. ಸಿದ್ದೇಶ್ವರ, ಮಲೇಬೆನ್ನೂರಿನಲ್ಲಿ ಕೇವಲ 30 ಜನರಿಗೆ ಲಸಿಕೆ ಹಾಕಲಾಗುತ್ತಿದೆ. ಹೀಗಾದರೆ ಸೋಂಕು ಹೆಚ್ಚಾಗುವ ಸಾಧ್ಯತೆ ಇದೆ ಎಂದು ಆತಂಕ ವ್ಯಕ್ತಪಡಿಸಿ, ಲಸಿಕೆ ಕೊರತೆಯಾದರೆ ಉಸ್ತುವಾರಿ ಸಚಿವರ ಗಮನಕ್ಕೆ ತನ್ನಿ ಎಂದರು. ಡಿಹೆಚ್‌ಓ ಡಾ. ನಾಗರಾಜ್ ಉತ್ತರಿಸಿ, ಲಸಿಕೆ ಪೂರೈಕೆಗೆ ಅನುಗುಣವಾಗಿ ವಿವಿಧ ಕೇಂದ್ರಗಳಿಗೆ ಹಂಚಿಕೆ ಮಾಡಲಾಗುತ್ತಿದೆ. ಕೊರತೆಯಾಗದಂತೆ ಸೂಕ್ತ ಕ್ರಮ ವಹಿಸಲಾಗುವುದು ಎಂದರು.

## ಕೋವಿಡ್ ಮಾರ್ಗಸೂಚಿ : ಹರಪನಹಳ್ಳಿ ತಾಲ್ಲೂಕಿನಲ್ಲಿ ಬಿಗಿ ಕ್ರಮ

ಹರಪನಹಳ್ಳಿ, ಏ.21- ತಾಲ್ಲೂಕಿನಲ್ಲಿ ಬಿಗಿ ಕ್ರಮ ಕೈಗೊಳ್ಳಲು ಸರ್ಕಾರಿ ಪದವಿ ಪೂರ್ವ ಕಾಲೇಜಿನ ಆವರಣದಲ್ಲಿ ತಾಲ್ಲೂಕು ಆಡಳಿತದಿಂದ ನಡೆದ ವಿವಿಧ ವರ್ಗಗಳ ಮುಖಂಡರ ಸಭೆಯಲ್ಲಿ ತೀರ್ಮಾನಿಸಲಾಯಿತು.

ತಹಶೀಲ್ದಾರ್ ಎಲ್.ಎಂ. ನಂದೀಶ್ ಮಾತನಾಡಿ, ಎಲ್ಲಾ ಧಾರ್ಮಿಕ ಕೇಂದ್ರಗಳು ಬಂದ್ ಆಗಲಿವೆ. ಕಲ್ಯಾಣ ಮಂಟಪಕ್ಕೆ ಅನುಮತಿ ಪಡೆಯಬೇಕು ಎಂದು ತಿಳಿಸಿದರು.

ಡಿವೈಎಸ್ಪಿ ಹಾಲಮೂರ್ತಿರಾವ್ ಮಾತನಾಡಿ, ಬಟ್ಟೆ ಅಂಗಡಿ, ಜ್ಯೂಯಲರಿ ಷಾಪ್‌ಗಳು ಬಂದ್ ಆಗಲಿವೆ. ಹೋಟೆಲ್‌ಗಳಲ್ಲಿ ಪಾರ್ಸಲ್‌ಗಳಿಗೆ ಮಾತ್ರ ಅವಕಾಶವಿದೆ. ಫುಟ್‌ಪಾತ್ ಅಂಗಡಿಗಳು ಬಂದ್ ಆಗಲಿವೆ. ಕೃಷಿ ಚಟುವಟಿಕೆಗಳಿಗೆ, ಕಟ್ಟಡ ಕೆಲಸಗಳಿಗೆ ಅವಕಾಶವಿದೆ ಎಂದು ಹೇಳಿದರು.

ಪುರಸಭಾ ಮುಖ್ಯಾಧಿಕಾರಿ ಬಿ.ಆರ್. ನಾಗರಾಜನಾಯ್ಕ ಮಾತನಾಡಿ, ಪುರಸಭೆ ಹಿಂಭಾಗ ಪ್ರತಿದಿನ ನಡೆಯುವ ದಿನ ವಹಿ ಸಂತೆ ಹಾಗೂ ಶನಿವಾರ ನಡೆಯುವ ವಾರದ ಸಂತೆಯನ್ನು ಸ್ಟೇಡಿಯಂಗೆ ಸ್ಥಳಾಂತರ ಮಾಡಲಾಗುವುದು ಎಂದು ಹೇಳಿದರು.

ವೃತ್ತ ನಿರೀಕ್ಷಕ ನಾಗರಾಜ ಕಮ್ಮಾರ ಮಾತನಾಡಿದರು. ಪುರಸಭಾ ಅಧ್ಯಕ್ಷ ಮಂಜುನಾಥ್ ಇಜಂತಕರ್, ಸದಸ್ಯ ಕಿರಣಕುಮಾರ್ ಶಾನುಬಾಗ್, ಪಿಎಸ್‌ಐಗಳಾದ ಪ್ರಕಾಶ್, ಕಿರಣಕುಮಾರ್, ಪ್ರಶಾಂತ್ ಇತರರು ಪಾಲ್ಗೊಂಡಿದ್ದರು.


**REQUIRED**
**India's largest Financial Company** is offering Income Opportunity for Senior Citizens, Retired Teachers / Lecturers / Bankers, Doctors, Businessmen and Home Makers with Fixed Payout and Incentives.
Call : 94494 04209

**2 BHK ಮನೆ ಬಾಡಿಗೆಗೆ ಇದೆ**
ಪೂರ್ವ ಬಾಗಿಲು, ದಕ್ಷಿಣಕ್ಕೆ ರಸ್ತೆ, ಅಶೋಕ ನಗರ, 1ನೇ ಕ್ರಾಸ್, ಬಲಭಾಗ ಯರಗುಂಟೆ ಹೆಚ್.ಪಿ ಗ್ಯಾಸ್ ಗೋಡೌನ್ ಎದುರು, ಕೊಂಡಜ್ಜಿ ರಸ್ತೆ, ದಾವಣಗೆರೆ.
ಮೊ: 88841 67704

**ದೈವಜ್ಞ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿ.,**
ವಿಜಯಲಕ್ಷ್ಮಿ ರಸ್ತೆ, ದಾವಣಗೆರೆ.
**CLERICAL ಪೋಸ್ಟ್‌ಗೆ ಪುರುಷ/ಮಹಿಳಾ ಅಭ್ಯರ್ಥಿಗಳು ಬೇಕಾಗಿದ್ದಾರೆ.**
B.Com, M.Com, ಹಾಗೂ MBA ಆದವರಿಗೆ ಆದ್ಯತೆ.
Age limit : 23 to 30
Contact : Manager / Secretary
PRAVEEN RAIKAR,
Mob. 91417 40750


## ಮುಷ್ಕರಕ್ಕೆ ಸ್ಪಂದಿಸದ ಸರ್ಕಾರ : ದುಗ್ಗಪ್ಪ ಆಕ್ರೋಶ

ದಾವಣಗೆರೆ, ಏ.20- ಕಳೆದ 14 ದಿನಗಳಿಂದ ಹೆಂಡತಿ, ಮಕ್ಕಳ ಸಮೇತ ವೇತನ ಹೆಚ್ಚಳಕ್ಕೆ ಆಗ್ರಹಿಸಿ, ಸಾರಿಗೆ ನೌಕರರು ನಡೆಸುತ್ತಿರುವ ಮುಷ್ಕರಕ್ಕೆ ಇದುವ ರೆಗೂ ಸ್ಪಂದಿಸದ ಸರ್ಕಾರದ ವಿರುದ್ಧ ಕೆಪಿಸಿಸಿ ಸದಸ್ಯ ಹೆಚ್. ದುಗ್ಗಪ್ಪ ಆಕ್ರೋಶ ವ್ಯಕ್ತಪಡಿಸಿದ್ದಾರೆ. ರಾಜ್ಯದ ಕೂಲಿ ಕಾರ್ಮಿಕರು, ಪೌರ ಕಾರ್ಮಿಕರು, ಸರ್ಕಾರಿ ನೌಕರರು, ರೈತರು, ಮಹಿಳೆಯರು, ವೈದ್ಯರು, ವಿಕಲಚೇತನರು ಸೇರಿದಂತೆ, ಶ್ರಮಿಕ ವರ್ಗದವರು, ರಾಜಕಾರಣಿಗಳಿಗೆ ಮತ ನೀಡಿ ಪ್ರಧಾನಿ, ಮುಖ್ಯಮಂತ್ರಿ, ಸಂಸದರ, ಶಾಸಕರ ಪಟ್ಟಗಳನ್ನು ಕೊಟ್ಟಿರುವ ಮತದಾರ ಪ್ರಭುಗಳಿಗೆ ಶ್ರಮಕ್ಕೆ ತಕ್ಕ ಸವಲತ್ತುಗಳನ್ನು ನೀಡಲು ನಿರ್ಲಕ್ಷ್ಯ ವಹಿಸುತ್ತಿದ್ದಾರೆ ಎಂದು ಕಿಡಿಕಾರಿದ್ದಾರೆ.



ಸಾರಿಗೆ ನೌಕರರು ವೇತನ ಹೆಚ್ಚಿಸಲು ಒತ್ತಾಯಿಸಿ, ಹಸು ಗೂಸುಗಳ ಸಮೇತ ಮುಷ್ಕರ ನಡೆಸುತ್ತಿ ದ್ದರು. ಅವರ ಮೇಲೆ ಸರ್ಕಾರಕ್ಕೆ ಕಾಳಜಿ, ಕನಿಕರವಿಲ್ಲವೇ? ಅವರು, ಶ್ರಮಕ್ಕೆ ತಕ್ಕಂತೆ ವೇತನ ಹೆಚ್ಚು ಮಾಡಲು ಬೇಡಿಕೆ ಇಟ್ಟಿದ್ದಾರೆಯೇ ವಿನಃ ಬೇರೆ ಏನೂ ಕೇಳಿಲ್ಲ ಎಂದು ಕುಟುಕಿದ್ದಾರೆ.

ಸಾರಿಗೆ ನೌಕರರಷ್ಟೇ ಅಲ್ಲದೇ, ಕಳೆದ ನಾಲ್ಕು ತಿಂಗಳಿಂದಲೂ ರೈತರು ಕೃಷಿ ಕಾಯ್ದೆ ತಿದ್ದುಪಡಿ ವಿರೋಧಿಸಿ ಪ್ರತಿಭಟನೆ ನಡೆಸು ತ್ತಿದ್ದು, ದೇಶಕ್ಕೆ ಅನ್ನ ನೀಡುವ ರೈತರಿಗೂ ನ್ಯಾಯ ಸಿಗುತ್ತಿಲ್ಲ, ಜತೆಗೆ ಕೊರೊನಾ ವಾರಿಯರ್‌ಗಳಾಗಿ ಕೆಲಸ ಮಾಡಿದ ಆಶಾ ಕಾರ್ಯಕರ್ತೆಯರು ಸಹ ಸರಿಯಾದ ಸಂಬಳಕ್ಕಾಗಿ ಮುಷ್ಕರ ನಡೆಸಬೇಕಾ ಯಿತು, ಕೆಲಸಕ್ಕೆ ತಕ್ಕ ವೇತನ ನೀಡದಿದ್ದ ಮೇಲೆ ಅವರಿಂದ ಏಕೆ ಕೆಲಸ ಪಡೆಯಬೇಕು? ಎಂದು ಪ್ರಶ್ನಿಸಿದ್ದಾರೆ.

ರಾಜ್ಯದ ಎಲ್ಲಾ 28 ಸಂಸದರು, ಶಾಸಕರು, ಮುಖ್ಯಮಂತ್ರಿಗಳಲ್ಲಿ ಯಾರೂ ಕಾರ್ಮಿಕರ, ನೌಕರರ ಬಗ್ಗೆ ಕಾಳಜಿ ತೋರುತ್ತಿಲ್ಲ. ಇವರೆಲ್ಲರಿಗೂ ಅಧಿಕಾರದಲ್ಲಿದ್ದಾಗಲೂ ವೇತನ, ಅಧಿಕಾರದಿಂದ ಕೆಳಗಿಳಿದಾಗಲೂ ಪಿಂಚಣಿ ದೊರೆಯುತ್ತದೆ. ಇವರೆಲ್ಲರ ಕಷ್ಟಕ್ಕೆ ಸ್ಪಂದಿಸುವಂತೆ ಹೆಚ್. ದುಗ್ಗಪ್ಪ ಆಗ್ರಹಿಸಿದ್ದಾರೆ. ಕೂಡಲೇ ಶಾಸಕರು, ಮಂತ್ರಿಗಳು, ಸಂಸದರು ಸಾರಿಗೆ ನೌಕರರ ಕಷ್ಟಕ್ಕೆ ಸ್ಪಂದಿಸಿ, ಅವರ ನ್ಯಾಯಯುತ ಬೇಡಿಕೆ ಗಳನ್ನು ಈಡೇರಿಸುವಂತೆ ಅವರು ಒತ್ತಾಯಿಸಿದ್ದಾರೆ.

## ಹರಿಹರ : ಉದ್ರಿಗಾಗಿ ಪೆಟ್ರೋಲ್ ಬಂಕ್‌ನಲ್ಲಿ ವಿವಾದ

ಹರಿಹರ, ಏ.21- ನಗರದ ಹಳೆ ಪಿ.ಬಿ. ರಸ್ತೆಯಲ್ಲಿರುವ ನಂದಾ ಪೆಟ್ರೋಲ್ ಬಂಕ್‌ನಲ್ಲಿ ಕೆಲಸ ಮಾಡುತ್ತಿರುವ ಸಿಬ್ಬಂದಿಯ ಮೇಲೆ ಉದ್ರಿ ಡೀಸೆಲ್ ಹಾಕುವ ವಿಚಾರಕ್ಕೆ ವಾಹನದ ಮಾಲೀಕ ಹಲ್ಲೆ ಮಾಡಿದ ಘಟನೆ ನೆಡೆದಿದೆ.



ನಗರದ ಹಳೆ ಪಿ.ಬಿ ರಸ್ತೆಯ ನಂದಾ ಪೆಟ್ರೋಲ್ ಬಂಕ್‌ನಲ್ಲಿ ಸಂಜೆ ಅಬ್ರಾರ್ ಎಂಬುವವರ ವಾಹನದ ಚಾಲಕ ನಂದಾ ಪೆಟ್ರೋಲ್ ಬಂಕ್‌ಗೆ ಹೋಗಿ ನಮ್ಮ ಮಾಲೀಕರಾದ ಅಬ್ರಾರ್ ಹೇಳಿದ್ದಾರೆ ಉದ್ರಿ ಡೀಸೆಲ್ ಹಾಕುವಂತೆ ಪೆಟ್ರೋಲ್ ಬಂಕ್ ಕೆಲಸಗಾರ ನಾಗರಾಜ್ ಎಂಬುವವರಿಗೆ ಹೇಳಿದ್ದಾರೆ. ಆಗ ನಾಗರಾಜ್, ನಮ್ಮ ಮಾಲೀಕರು ನಿಮಗೆ ಉದ್ರಿ ಹಾಕಬೇಡಿ ಎಂದು ತಿಳಿಸಿದ್ದಾರೆ. ಆದ್ದರಿಂದ ನಾನು ಡೀಸೆಲ್ ಹಾಕುವುದಿಲ್ಲ ಎಂದು ತಿಳಿಸಿದ್ದಾರೆ. ಆಗ ವಾಹನ ಚಾಲಕ ತಮ್ಮ ವಾಹನ ಮಾಲೀಕ ಅಬ್ರಾರ್ ಎಂಬುವವರಿಗೆ ದೂರವಾಣಿ ಕರೆ ಮಾಡಿ ವಿಷಯ ಅವರ ಗಮನಕ್ಕೆ ತಂದಿದ್ದಾರೆ.

ಆ ತಕ್ಷಣವೇ ಸ್ಥಳಕ್ಕೆ ಆಗಮಿಸಿದ ವಾಹನ ಮಾಲೀಕ ಅಬ್ರಾರ್, ನಾಗರಾಜ್ ಬಳಿ ಮಾತನಾಡುತ್ತಾ ಮಾತಿಗೆ ಮಾತು ಬೆಳೆದು ಅದು ವಿಕೋಪಕ್ಕೆ ತಿರುಗಿದಾಗ ವಾಹನ ಮಾಲೀಕ ಅಬ್ರಾರ್ ನಾಗರಾಜ್ ಮತ್ತು ಹನುಮಂತ ಎಂಬುವವರ ಮೇಲೆ ಹಿಗ್ಗಾಮುಗ್ಗ ಹಲ್ಲೆ ಮಾಡಿದ್ದು, ಇದರಿಂದಾಗಿ ನಾಗರಾಜ್ ಮತ್ತು ಹನುಮಂತ ಎಂಬುವವರಿಗೆ ಕುತ್ತಿಗೆಗೆ ಗಾಯವಾಗಿದ್ದು, ಹಲ್ಲೆ ಮಾಡಿದ ವಿಚಾರವನ್ನು ನಾಗರಾಜ್ ಪೆಟ್ರೋಲ್ ಬಂಕ್ ಮಾಲೀಕರ ಗಮನಕ್ಕೆ ತಂದಿದ್ದಾರೆ.

ಆ ನಂತರದಲ್ಲಿ ಪೆಟ್ರೋಲ್ ಬಂಕ್ ಮಾಲೀಕರು ಪೊಲೀಸ್ ಅಧಿಕಾರಿಗಳ ಗಮನಕ್ಕೆ ತಂದು ನಂತರದಲ್ಲಿ ಪೊಲೀಸ್ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ, ನಾಗರಾಜ್ ಮತ್ತು ಹನುಮಂತರವರನ್ನು ವಶಕ್ಕೆ ಪಡೆದುಕೊಂಡು ಆರೋಗ್ಯ ತಪಾಸಣೆ ಮಾಡಿಸಿದರು.

ಸ್ಥಳಕ್ಕೆ ನಗರ ಠಾಣೆಯ ಐಪಿಎಸ್ ಬಸವರಾಜ್ ತೆಲಿ ಮತ್ತು ಪೊಲೀಸ್ ಸಿಬ್ಬಂದಿಗಳು ಸ್ಥಳದಲ್ಲಿ ಇರುವ ಸಿ.ಸಿ. ಕ್ಯಾಮರಾದಲ್ಲಿ ಘಟನೆ ಬಗ್ಗೆ ನೋಡಿದಾಗ ವಾಹನ ಮಾಲೀಕ ತಪ್ಪಾಗಿ ನಡೆದುಕೊಂಡಿರುವುದು ಸಿ.ಸಿ. ಕ್ಯಾಮರಾದಲ್ಲಿ ಕಂಡುಬಂದಿದೆ. ಅವರ ಮೇಲೆ ಮುಂದಿನ ಕ್ರಮಗಳನ್ನು ಜರುಗಿಸುವುದಾಗಿ ತಿಳಿಸಿದ್ದಾರೆ.

## ಆಕ್ಸಿಜನ್ : ಕಂಗಾಲು

**(1ನೇ ಪುಟದಿಂದ)** ಬೇರೆ ರಾಜ್ಯಗಳಿಗೆ ಪೂರೈಸಲಾಗುವುದು. ಪಾಣಿಪತ್‌ನಿಂದ ಫರೀದಾ ಬಾದ್‌ಗೆ ಆಸ್ಪತ್ರೆ ಬಳಕೆಗೆಂದು ರವಾನಿಸಲಾಗುತ್ತಿದ್ದ ಆಕ್ಸಿಜನ್ ಟ್ಯಾಂಕರ್ ಅನ್ನು ದೆಹಲಿ ಸರ್ಕಾರ ಲೂಟಿ ಮಾಡಿದೆ. ಇನ್ನು ಮುಂದೆ ಎಲ್ಲಾ ಆಕ್ಸಿಜನ್ ಟ್ಯಾಂಕರ್‌ಗಳನ್ನು ಪೊಲೀಸ್ ಭದ್ರತೆಯಲ್ಲಿ ಕಳಿಸಲಾಗುವುದು ಎಂದಿದ್ದಾರೆ.

## ಹರಿಹರ: ಎಪಿಎಂಸಿ ಅಧ್ಯಕ್ಷ ಸ್ಥಾನಕ್ಕೆ ಇಂದು ಚುನಾವಣೆ

ಇಲ್ಲಿನ ಎಪಿಎಂಸಿ ಅಧ್ಯಕ್ಷ ಸ್ಥಾನಕ್ಕೆ ಇಂದು ಚುನಾವಣೆ ನಡೆಯಲಿದೆ. ಹನುಮಂತ ರೆಡ್ಡಿ ಅವರ ರಾಜೀನಾಮೆಯಿಂದಾಗಿ ಅಧ್ಯಕ್ಷ ಸ್ಥಾನ ತೆರವಾಗಿದ್ದು, ಇಂದು ನಡೆಯಲಿರುವ ಚುನಾವಣೆಯಲ್ಲಿ ಕೊಮಾರನಹಳ್ಳಿಯ ಜಿ.ಮಂಜುನಾಥ್ ಪಟೇಲ್ ಅವರು ಅಧ್ಯಕ್ಷರಾಗಿ ಆಯ್ಕೆಯಾಗುವ ಸಾಧ್ಯತೆ ಇದೆ ಎನ್ನಲಾಗಿದೆ.

## ಮಲೇಬೆನ್ನೂರಿನಲ್ಲಿ ನೈಟ್ ಕರ್ಫ್ಯೂ ಜಾರಿ: ಪಟ್ಟಣ ಸ್ತಬ್ಧ

ಮಲೇಬೆನ್ನೂರು, ಏ.21 - ಕೊರೊನಾ ನಿಯಂತ್ರಣಕ್ಕಾಗಿ ನೈಟ್ ಕರ್ಫ್ಯೂಗೆ ಮಲೇಬೆನ್ನೂರಿನಲ್ಲಿ ಉತ್ತಮ ಬೆಂಬಲ ವ್ಯಕ್ತವಾಯಿತು. ಪಟ್ಟಣದಲ್ಲಿ ರಾತ್ರಿ 8.30 ರಿಂದಲೇ ವರ್ತಕರು ಸ್ವಯಂ-ಪ್ರೇರಿತರಾಗಿ ಅಂಗಡಿ ಮುಂಗಟ್ಟುಗಳನ್ನು ಮುಚ್ಚಿದರು, ಆಸ್ಪತ್ರೆ, ಮೆಡಿಕಲ್ ಶಾಪ್ ಹೊರತು ಪಡಿಸಿ ಹೋಟೆಲ್, ಕಿರಾಣಿ ಅಂಗಡಿ, ಬಾರ್, ರೆಸ್ಟೋರೆಂಟ್ ಸೇರಿದಂತೆ ವ್ಯವಹಾರ ಬಂದ್ ಆಗಿದ್ದರಿಂದ ಮಲೇಬೆನ್ನೂರು ಸ್ತಬ್ಧವಾಗಿತ್ತು.

# ಕದ್ದಾದರೂ ಆಸ್ಪತ್ರೆಗಳಿಗೆ ಆಕ್ಸಿಜನ್ ಕೊಡಿ

## ಆಕ್ಸಿಜನ್ ಪೂರೈಕೆ ಸಂಪೂರ್ಣ ಹೊಣೆ ಕೇಂದ್ರದ್ದು : ಹೈಕೋರ್ಟ್

ನವದೆಹಲಿ, ಏ. 21 – ಕೊರೊನಾ ರೋಗಿಗಳಿಗೆ ಆಕ್ಸಿಜನ್ ಪೂರೈಸುವುದಕ್ಕೆ ಸಂಬಂಧಿಸಿದಂತೆ ಕೇಂದ್ರದ ಮೋದಿ ಸರ್ಕಾರ ಹಾಗೂ ಖಾಸಗಿ ಕೈಗಾರಿಕೆಗಳನ್ನು ಕಟುವಾಗಿ ತರಾಟೆಗೆ ತೆಗೆದುಕೊಂಡಿರುವ ದೆಹಲಿ ಹೈಕೋರ್ಟ್, ಯಾವುದೇ ಮಾರ್ಗದಿಂದಾದರೂ ಆಸ್ಪತ್ರೆಗಳಿಗೆ ಆಕ್ಸಿಜನ್ ಪೂರೈಸುವಂತೆ ತಾಕೀತು ಮಾಡಿದೆ.

ಸರ್ಕಾರ ಆಕ್ಸಿಜನ್ ಪೂರೈಕೆಯ ಎಲ್ಲಾ ಮಾರ್ಗಗಳನ್ನು ಬಳಸುತ್ತಿಲ್ಲ. ಭಿಕ್ಷೆ ಬೇಡಿ, ಸಾಲ ಮಾಡಿ ಇಲ್ಲವೇ ಕದ್ದಾದರೂ ಆಕ್ಸಿಜನ್ ಕೊಡಿ ಎಂದು ಕೇಂದ್ರ ಸರ್ಕಾರಕ್ಕೆ ಹೈಕೋರ್ಟ್ ತಾಕೀತು ಮಾಡಿದೆ.

ತುರ್ತು ಪರಿಸ್ಥಿತಿಗೆ ಸರ್ಕಾರ ಏಕೆ ಎಚ್ಚೆತ್ತುಕೊಳ್ಳುತ್ತಿಲ್ಲ? ಆಸ್ಪತ್ರೆಗಳಿಗೆ ವೈದ್ಯಕೀಯ ಆಕ್ಸಿಜನ್ ಪೂರೈಕೆ ನಿಂತರೆ ನರಕವೇ ಸೃಷ್ಟಿಯಾಗುತ್ತದೆ ಎಂದು ಹೈಕೋರ್ಟ್ ಎಚ್ಚರಿಸಿದೆ. ಸಾರ್ವಜನಿಕ ರಜಾ ದಿನದಲ್ಲಿ ಆಕ್ಸಿಜನ್ ಪೂರೈಕೆ ಕುರಿತ ಅರ್ಜಿಯ ವಿಚಾರಣೆ ನಡೆಸಿದ ಸಂದರ್ಭದಲ್ಲಿ ಹೈಕೋರ್ಟ್ ಈ ರೀತಿ ಕಿಡಿ ಕಾರಿದೆ.

ಮ್ಯಾಕ್ಸ್ ಆಸ್ಪತ್ರೆಗಳನ್ನು ನಡೆಸುವ ಬಾಲಾಜಿ ಮೆಡಿಕಲ್ ಅಂಡ್ ರೀಸರ್ಚ್ ಸೆಂಟರ್, ತನಗೆ ಆಕ್ಸಿಜನ್ ಪೂರೈಕೆಯಾಗದೇ ರೋಗಿಗಳ ಜೀವ ಅಪಾಯಕ್ಕೆ ಸಿಲುಕಿದೆ ಎಂದು ಹೈಕೋರ್ಟ್‌ನಲ್ಲಿ ಅರ್ಜಿ ದಾಖಲಿಸಿತ್ತು.

ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ವಿಪಿನ್ ಸಂಘಿ ಹಾಗೂ ರೇಖಾ ಪಲ್ಲಿ ಅವರನ್ನು ಒಳಗೊಂಡ ಪೀಠ, ದೇಶದಲ್ಲಿ ಸಾವಿರಾರು ಜನ ಸಾಯುವುದನ್ನು ನೋಡಲು ನೀವು ಬಯಸುತ್ತೀರಾ? ಕೈಗಾರಿಕೆಗಳ ಆಕ್ಸಿಜನ್ ಅನ್ನು ಸಮರ್ಪಕವಾಗಿ ಆಸ್ಪತ್ರೆಗಳಿಗೆ ಪೂರೈಸುತ್ತಿಲ್ಲ ಎಂದು ಕೇಂದ್ರವನ್ನು ಟೀಕಿಸಿದೆ.

ಆಕ್ಸಿಜನ್ ಪೂರೈಸುವ ಹೊಣೆ ಸಂಪೂರ್ಣವಾಗಿ ಕೇಂದ್ರ ಸರ್ಕಾರದ ಮೇಲಿದೆ. ಅಗತ್ಯವಾದರೆ ಉಕ್ಕು ಹಾಗೂ ಪೆಟ್ರೋಲಿಯಂ ಸೇರಿದಂತೆ ಕೈಗಾರಿಕೆಗಳ ಎಲ್ಲ ಆಕ್ಸಿಜನ್ ಅನ್ನು ವೈದ್ಯಕೀಯ ಬಳಕೆಗೆ ಕಳಿಸಬೇಕು ಎಂದು ನ್ಯಾಯಾಲಯ ಹೇಳಿದೆ.

ಸರ್ಕಾರದಲ್ಲಿ ಮಾನವೀಯತೆ ಉಳಿದಿಲ್ಲವೇ? ಜನ ಸಾಯುತ್ತಿರುವಾಗ ನಿಮಗೆ ಕೈಗಾರಿಕೆಗಳ ಚಿಂತೆ ಇದೆ. ಇದು ತುರ್ತು ಪರಿಸ್ಥಿತಿ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು ಎಂದು ನ್ಯಾಯಾಲಯ ತಿಳಿಸಿದೆ.

ಉಕ್ಕು ಹಾಗೂ ಪೆಟ್ರೋಲಿಯಂ ಕಂಪನಿಗಳು ಆಕ್ಸಿಜನ್ ಕಬಳಿಸುತ್ತಿವೆ. ಆಸ್ಪತ್ರೆಗಳಿಗೆ ಬೇಕಾಗಿದ್ದ ಆಕ್ಸಿಜನ್ ಪಡೆದುಕೊಳ್ಳುತ್ತಿವೆ ಎಂದು ಹೇಳಿರುವ ನ್ಯಾಯಾಲಯ, ಟಾಟಾ ಸಂಸ್ಥೆಯು ತನ್ನ ಉಕ್ಕು ಘಟಕದಿಂದ ಆಕ್ಸಿಜನ್ ಅನ್ನು ವೈದ್ಯಕೀಯ ಬಳಕೆಗೆ ಕಳಿಸುತ್ತಿದೆ. ಹೀಗಿರುವಾಗ ಬೇರೆಯವರು ಏಕೆ ಕಳಿಸುತ್ತಿಲ್ಲ? ಇದು ದುರಾಸೆಯ ಪರಮಾವಧಿ ಎಂದು ನ್ಯಾಯಾಲಯ ಕೈಗಾರಿಕೆಗಳನ್ನೂ ತರಾಟೆಗೆ ತೆಗೆದುಕೊಂಡಿದೆ.

# ಮೇ 4 ರವರೆಗೆ ರಾತ್ರಿ-ವಾರಾಂತ್ಯ ಕರ್ಫ್ಯೂ ಘೋಷಣೆ

ದಾವಣಗೆರೆ, ಏ.21 - ಜಿಲ್ಲೆಯಾದ್ಯಂತ ಕೋವಿಡ್ 19 ಸೋಂಕು ಹರಡದಂತೆ ತಡೆಯುವ ಸಲುವಾಗಿ ಪರಿಣಾಮಕಾರಿಯಾಗಿ ಸೂಕ್ತ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲು ಸಿಆರ್‌ಪಿಸಿ ಕಲಂ 144 ರನ್ವಯ ಜಿಲ್ಲಾಧಿಕಾರಿಗಳು ಏ.21 ರಿಂದ ಮೇ 4 ರವರೆಗೆ ಪ್ರತಿದಿನ ರಾತ್ರಿ 9 ಗಂಟೆಯಿಂದ ಬೆಳಿಗ್ಗೆ 6 ಗಂಟೆಯವರೆಗೆ ರಾತ್ರಿ ಕರ್ಫ್ಯೂ ಮತ್ತು ವಾರಾಂತ್ಯದ ಕರ್ಫ್ಯೂವನ್ನು ಶುಕ್ರವಾರ ರಾತ್ರಿ 9 ರಿಂದ ಸೋಮವಾರ ಬೆಳಿಗ್ಗೆ 6 ಗಂಟೆಯವರೆಗೆ ಘೋಷಿಸಿದ್ದಾರೆ.

ಆದೇಶ ಉಲ್ಲಂಘಿಸಿದವರ ಮೇಲೆ ಕ್ರಮ ಜರುಗಿಸುವುದಾಗಿ ಜಿಲ್ಲಾಧಿಕಾರಿ ಮಹಾಂತೇಶ ಬೀಳಗಿ ತಿಳಿಸಿದ್ದಾರೆ.

# ತರಬೇತಿಗೆ ಮುಕ್ತಾಯ ಎಂಬುದಿಲ್ಲ: ಎಸ್ಪಿ

## 8ನೇ ತಂಡದ 66 ಮಂದಿ ಸಶಸ್ತ್ರ ಪೊಲೀಸ್ ಪ್ರಶಿಕ್ಷಣಾರ್ಥಿಗಳ ನಿರ್ಗಮನ



ದಾವಣಗೆರೆ, ಏ.21- ಜೀವನದಲ್ಲಿ ತರಬೇತಿಗಳಿಗೆ ಮುಕ್ತಾಯ ಎಂಬುದಿಲ್ಲ. ನಮ್ಮ ಕರ್ತವ್ಯಕ್ಕೆ ತಕ್ಕಂತೆ ತರಬೇತಿ ನಿರಂತರವಾಗಿ ಅಗತ್ಯವಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಹನುಮಂತರಾಯ ತಿಳಿಸಿದರು.

ಅವರು, ಇಂದು ನಗರದ ಜಿಲ್ಲಾ ಪೊಲೀಸ್ ಕವಾಯತು ಮೈದಾನದಲ್ಲಿ ಆಯೋಜಿಸಲಾಗಿದ್ದ ಪೊಲೀಸ್ ತರಬೇತಿ ಶಾಲೆಯ 8ನೇ ತಂಡದ ಸಶಸ್ತ್ರ ಪೊಲೀಸ್ ಪ್ರಶಿಕ್ಷಣಾರ್ಥಿಗಳ ನಿರ್ಗಮನದ ಪಥ ಸಂಚಲನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ನಮ್ಮ ಸೇವಾವಧಿ ತನಕವೂ ಪ್ರತಿದಿನ, ಪ್ರತಿ ಕ್ಷಣ ಹೊಸ ಪರಿಸ್ಥಿತಿ, ಕಾನೂನು ನಿಯಮಗಳ ಅಡಿಯಲ್ಲಿ ಕೆಲಸ ಮಾಡಲು ಬುನಾದಿಯಾಗಿದೆ. ಕಳೆದ 8 ತಿಂಗಳ ಕಾಲ ಅಧಿಕಾರಿ ಮತ್ತು ಸಿಬ್ಬಂದಿಗಳ ಸಹಕಾರದಲ್ಲಿ ತರಬೇತಿಯನ್ನು ಪಡೆದಿದ್ದು, ಈ ತರಬೇತಿ ಕೇವಲ ಇಷ್ಟಕ್ಕೆ ಸೀಮಿತವಾಗದೇ ಮತ್ತಷ್ಟು ತರಬೇತಿಯನ್ನು ಪಡೆದು ಸಮರ್ಪಕ ಸೇವೆ ಸಲ್ಲಿಸಲು ಸನ್ನದ್ಧರಾಗಿರಬೇಕು ಎಂದು ಪ್ರಶಿಕ್ಷಣಾರ್ಥಿಗಳಿಗೆ ಕಿವಿಮಾತು ಹೇಳಿದರು.

ಪ್ರಸ್ತುತ ಕೊರೊನಾ ದೊಡ್ಡ ಸವಾಲಾಗಿ ಎಲ್ಲೆಡೆ ಹರಡಿದ್ದು, ತರಬೇತಿ ಪಡೆದು ಹೊರ ಬರುತ್ತಿರುವ ನಿಮಗೆ ಕೊರೊನಾ ಸಂಬಂಧಿಸಿದ ಕರ್ತವ್ಯಕ್ಕೆ ನೇಮಿಸಲಿದ್ದು, ಇದಕ್ಕೆ ಮಾನಸಿಕ, ದೈಹಿಕವಾಗಿ ಸಿದ್ಧರಾಗಿರಬೇಕು. ಕೊರೊನಾ ಕಾರಣ ರಾತ್ರಿ ಮತ್ತು ವಾರದ ಕರ್ಫ್ಯೂ, ಲಾಕ್‌ಡೌನ್ ಸೇರಿದಂತೆ ಕಠಿಣ ನಿಬಂಧನೆಗಳು ಜಾರಿಗೊಂಡಿದೆ. ಈ ಕಾನೂನಿನ ಸೂಚನೆ ಪಾಲನೆ ಜೊತೆಗೆ ನೀವು ಸಹ ಎಚ್ಚರಿಕೆಯಿಂದ ಕರ್ತವ್ಯ ನಿರ್ವಹಿಸಬೇಕು ಎಂದು ಸಲಹೆ ನೀಡಿದರು.

ಇಲಾಖೆ ಮೂಲಕ ಸಾರ್ವಜನಿಕರಿಗೆ ಪ್ರಾಮಾಣಿಕ ಸೇವೆ ನೀಡುವ ಬಗ್ಗೆ ಪಡೆದಿರುವ ಪ್ರತಿಜ್ಞೆಯನ್ನು ಮರೆಯಬಾರದು. ದೇಶದ ಪ್ರಮುಖ ರಕ್ಷಣೆಯ ಜವಾಬ್ದಾರಿ ನಮ್ಮ ಮೇಲಿದೆ. ಶಸ್ತ್ರ ಸಹಿತ ಸೇವೆ ನೀಡಲು ನಮಗೆ ದೇಶ ಸೇವೆ ಮಾಡುವ ಸದಾವಕಾಶ ಇದೆ. ಪ್ರಜ್ಞೆಯಿಂದ ಪ್ರತಿಜ್ಞೆಯನ್ನು ಕಟ್ಟುನಿಟ್ಟಾಗಿ ಪಾಲಿಸಿದರೆ ದೇಶ ಸೇವೆಯಲ್ಲಿ ಉತ್ತಮ ಕೊಡುಗೆ ನೀಡಬಹುದಲ್ಲದೇ, ಸೇವೆಯಲ್ಲಿ ತೃಪ್ತಿ ಕಂಡುಕೊಳ್ಳಬಹುದೆಂದರು.

ತರಬೇತಿ ಶಾಲೆಯಲ್ಲಿ ಕಾರವಾರ, ಮೈಸೂರು ನಗರ, ಬೆಳಗಾವಿ, ಉಡುಪಿ, ವಿಜಯಪುರ, ಹಾಸನ, ಶಿವಮೊಗ್ಗ, ಹುಬ್ಬಳಿ, ಧಾರವಾಡ, ಬಳ್ಳಾರಿ, ಬೆಂಗಳೂರು ನಗರ ಈ ಭಾಗಗಳಿಂದ ಬಂದು ತರಬೇತಿ ಪಡೆದಿದ್ದ ಒಟ್ಟು 66 ಮಂದಿ ಪ್ರಶಿಕ್ಷಾರ್ಥಿಗಳು ನಿರ್ಗಮನಗೊಂಡರು.

**ಸಮಯ, ಸಂದರ್ಭಕ್ಕೆ ಅನುಸಾರವಾಗಿ ನಾವು ಕರ್ತವ್ಯಕ್ಕೆ ತಯಾರಾಗಿರಬೇಕು. ಕರ್ತವ್ಯದ ಜೊತೆಗೆ ಕುಟುಂಬದ ಕಾಳಜಿಯಯನ್ನೂ ಮರೆಯಬಾರದು. ದೈನಂದಿನ ಜೀವನ ಶೈಲಿ ಉತ್ತಮವಾಗಿದ್ದರೆ ವೈಯಕ್ತಿಕವಾಗಿ ಮತ್ತು ವೃತ್ತಿಯಲ್ಲಿ ಸಾರ್ಥಕತೆಯನ್ನು ಕಂಡುಕೊಳ್ಳಬಹುದು. ಬುದ್ಧಿವಂತಿಕೆ, ಕಠಿಣ ಪರಿಶ್ರಮ, ಸ್ಮಾರ್ಟ್ ವರ್ಕ್ ಇದ್ದರೆ ನಮ್ಮ ಕರ್ತವ್ಯಕ್ಕೆ ಪೂರಕ.**

**- ಹನುಮಂತರಾಯ, ಎಸ್ಪಿ**

ಇದಕ್ಕೂ ಮುನ್ನ 8ನೇ ತಂಡದ ಸಶಸ್ತ್ರ ಪೊಲೀಸ್ ಪ್ರಶಿಣಾರ್ಥಿಗಳು ಆಕರ್ಷಕ ಪಥ ಸಂಚಲನ ನಡೆಸಿ ಗಮನ ಸೆಳೆದರು. ಡಿಎಆರ್ ಪೊಲೀಸ್ ಉಪಾಧೀಕ್ಷಕ ಪಿ.ಬಿ.ಪ್ರಕಾಶ್ ಕವಾಯತು ಮುಖ್ಯ ನಾಯಕರಾಗಿದ್ದರು. ಆರ್‌ಪಿಐ ಕಿರಣ್‌ಕುಮಾರ್ ಎಸ್.ಎನ್. ಅವರು ಕವಾಯತಿನ ಉಪನಾಯಕರಾಗಿದ್ದರು.

**ಪ್ರಶಸ್ತಿ ಪಡೆದವರು:** ಹುಬ್ಬಳಿ, ಧಾರವಾಡ ನಗರದ ಲಕ್ಷ್ಮಣ ಎಂಬಾತ ಸರ್ವೋತ್ತಮ ಪ್ರಶಸ್ತಿ ಪಡೆದರು. ಒಳಾಂಗಣ ವಿಭಾಗದಲ್ಲಿ ಬೆಳಗಾವಿ ಜಿಲ್ಲೆಯ ರಮೇಶ್ ಸ ಬಿರಾದಾರ ಪಾಟೀಲ, ಮೈಸೂರು ನಗರದ ಡಿಂಡಿಮ ಶಂಕರ, ಹುಬ್ಬಳಿ ಧಾರವಾಡದ ಮಂಜುನಾಥ ಹಡಪದ ಪ್ರಶಸ್ತಿ ಪಡೆದರು. ಹೊರಾಂಗಣ ವಿಭಾಗದಲ್ಲಿ ಹುಬ್ಬಳಿ-ಧಾರವಾಡದ ಲಕ್ಷ್ಮಣ, ಕಾರವಾರ ಜಿಲ್ಲೆಯ ಡಿ.ಇಂದ್ರಕುಮಾರ್, ಬೆಂಗಳೂರು ನಗರದ ರಾಘವೇಂದ್ರ .ವಿ ಅವರಾದಿ ಹಾಗೂ ಎಸ್.ಎಲ್.ಆರ್. ರೈಫಲ್ ಶೂಟಿಂಗ್ ವಿಭಾಗದಲ್ಲಿ ಮಾರುತಿ ಅಂಕಲಗಿ, ಕುಮಾರನಾಯ್ಕ್, ಕಾರವಾರ ಜಿಲ್ಲೆಯ ಡಿ. ಇಂದ್ರಕುಮಾರ್ ಪ್ರಶಸ್ತಿ ಪಡೆದರು.

# ಜಿಲ್ಲಾಸ್ಪತ್ರೆಗೆ ಸಚಿವರ ದಿಢೀರ್ ಭೇಟಿ: ಅಧಿಕಾರಿಗಳಿಗೆ ಎಚ್ಚರಿಕೆ



ದಾವಣಗೆರೆ,ಏ.21 - ಜಿಲ್ಲಾ ಚಿಗಟೇರಿ ಆಸ್ಪತ್ರೆಗೆ ಅನಿರೀಕ್ಷಿತವಾಗಿ ಭೇಟಿ ನೀಡಿದ ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜ್ ಕೋವಿಡ್ ಚಿಕಿತ್ಸೆ ಮತ್ತು ಇತರೆ ನಿರ್ವಹಣೆ ವ್ಯವಸ್ಥೆಯನ್ನು ಪರಿಶೀಲಿಸಿದರು.

ಜಿಲ್ಲಾ ಆಸ್ಪತ್ರೆಗೆ ಭೇಟಿ ನೀಡಿದ ಸಂದರ್ಭದಲ್ಲಿ ಕೌಂಟರ್ ಬಳಿ ಕೆಲ ರೋಗಿಗಳು ಚಿಕಿತ್ಸೆಗಾಗಿ ಬೆಳಿಗ್ಗೆ 8 ಗಂಟೆಯಿಂದ ಕಾಯುತ್ತಾ ಕುಳಿತಿರುವುದನ್ನು ಕಂಡು ಅವರೊಂದಿಗೆ ಸಂವಾದ ನಡೆಸಿದರು.

ಈ ವೇಳೆ ಕಾಲಿಗೆ ಪೆಟ್ಟಾದ, ಜಾಂಡಿಸ್ ರೋಗಕ್ಕೆ ತುತ್ತಾದ ಹೀಗೆ ವಿವಿಧ ರೀತಿಯ ಗಂಭೀರ ಸಮಸ್ಯೆವುಳ್ಳ ರೋಗಿಗಳು ಬೆಳಗಿನಿಂದಲೂ ಆಸ್ಪತ್ರೆಯಲ್ಲಿ ಕಾದು ಕುಳಿತರೂ ತಮಗೆ ಸಮರ್ಪಕ ಚಿಕಿತ್ಸೆ ದೊರಕದ ಬಗ್ಗೆ ಸಚಿವರ ಬಳಿ ಅಸಹಾಯಕತೆ ವ್ಯಕ್ತಪಡಿಸಿದರು.

ಈ ಬಗ್ಗೆ ಜಿಲ್ಲಾ ಶಸ್ತ್ರಚಿಕಿತ್ಸಕ ಡಾ. ಜಯಪ್ರಕಾಶ್‌ರವರ ಗಮನಕ್ಕೆ ತಂದು ಈ ರೀತಿ ತುರ್ತು ಮತ್ತು ಗಂಭೀರ ಸಮಸ್ಯೆ ಇರುವ ರೋಗಿಗಳಿಗೆ ಆಸ್ಪತ್ರೆಯಲ್ಲಿ ಕಾಯುವಂತೆ ಮಾಡಬಾರದು. ತಕ್ಷಣವೇ ಚಿಕಿತ್ಸೆ ನೀಡಬೇಕು ಹಾಗೂ ಈ ರೀತಿ ರೋಗಿಗಳಿಗೆ ಅನುಕೂಲ ಮಾಡದೇ ಇರುವ ವೈದ್ಯರು ಮತ್ತು ಸಿಬ್ಬಂದಿ ವಿರುದ್ಧ ನಿರ್ದಾಕ್ಷಿಣ್ಯ ಕ್ರಮವನ್ನು ಜರುಗಿಸಬೇಕೆಂದು ಸೂಚನೆ ನೀಡಿದರು.

ಈ ವೇಳೆ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಜಿಲ್ಲಾ ಆಸ್ಪತ್ರೆಯಲ್ಲಿ ಕೆಲವು ನ್ಯೂನತೆಗಳು ಕಂಡು ಬಂದಿವೆ. ಬಡ ರೋಗಿಗಳು ಸರ್ಕಾರಿ ಆಸ್ಪತ್ರೆಯ ನೆರವಿಗಾಗಿ ಧಾವಿಸುತ್ತಿದ್ದು ಅವರಿಗೆ ಖಾಸಗಿ ಆಸ್ಪತ್ರೆಗಳಿಗಿಂತ ಉತ್ತಮವಾದ ವೈದ್ಯಕೀಯ ಸೌಲಭ್ಯಗಳನ್ನು ಒದಗಿಸಬೇಕು ಎಂದು ಜಿಲ್ಲಾಧಿಕಾರಿಗಳು ಹಾಗೂ ಆರೋಗ್ಯ ಇಲಾಖೆ ಅಧಿಕಾರಿಗಳಿಗೆ ಸೂಚನೆ ನೀಡಿದ್ದೇನೆ. ಮುಂದಿನ ದಿನಗಳಲ್ಲಿ ಯಾವುದೇ ಅವ್ಯವಸ್ಥೆ ಕಂಡುಬಂದಲ್ಲಿ ಸಂಬಂಧಿಸಿದ ಅಧಿಕಾರಿ ಗಳನ್ನು ಅಮಾನತ್ತುಗೊಳಿಸಲಾಗುವುದು ಎಂದು ಎಚ್ಚರಿಕೆ ನೀಡಿದ್ದೇನೆ ಎಂದರು.

# ಪಾಲಿಕೆಯಿಂದ ಬಿಗಿ ಕ್ರಮ: ಥರ್ಮಲ್ ಸ್ಕ್ರೀನಿಂಗ್ ಕಡ್ಡಾಯ

ದಾವಣಗೆರೆ, ಏ.21- ಜಿಲ್ಲೆಯಲ್ಲಿ ಕೊರೊನಾ ಪ್ರಕರಣಗಳ ಸಂಖ್ಯೆ ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಹೆಚ್ಚಿನ ಜನದಟ್ಟಣೆಯನ್ನು ತಡೆಗಟ್ಟಲು ದಾವಣಗೆರೆ ಮಹಾನಗರ ಪಾಲಿಕೆ ಬಿಗಿ ಕ್ರಮಗಳನ್ನು ಕೈಗೊಂಡಿದೆ. ಅಗತ್ಯವಿದ್ದರೆ ಮಾತ್ರ ಸಾರ್ವಜನಿಕರು ಪಾಲಿಕೆಗೆ ಆಗಮಿಸುವಂತೆ ಪಾಲಿಕೆ ಅಧಿಕಾರಿಗಳು ಮನವಿ ಮಾಡಿದ್ದಾರೆ.

ಬಿಗಿ ಕ್ರಮದ ನಿಟ್ಟಿನಲ್ಲಿ ಪಾಲಿಕೆಯ ಎಲ್ಲಾ ಒಳ ಬರುವ ಮತ್ತು ಹೊರ ಹೋಗುವ ಬಾಗಿಲುಗಳನ್ನು ಬಂದ್ ಮಾಡಿ, ಕೇವಲ ಮುಂಭಾಗದ ಮುಖ್ಯದ್ವಾರವನ್ನು ಮಾತ್ರ ತೆರೆಯಲಾಗಿತ್ತು. ಗುಂಪಾಗಿ ಜನರು ಒಳಹೋಗದಂತೆ ತಡೆಗಟ್ಟಲು ಬ್ಯಾರಿಕೇಡ್‌ಗಳನ್ನು ಹಾಕಲಾಗಿತ್ತು.

ಪಾಲಿಕೆಗೆ ಆಗಮಿಸುವ ಪ್ರತಿಯೊಬ್ಬರನ್ನು ಥರ್ಮಲ್ ಸ್ಕ್ರೀನಿಂಗ್‌ಗೆ ಒಳಪಡಿಸಲಾಗುತ್ತಿತ್ತು. ಅಲ್ಲದೇ ಸೋಂಕು ನಿವಾರಕ ದ್ರಾವಣವನ್ನು ಹಾಕಲಾಗುತ್ತಿತ್ತು. ಇದಕ್ಕಾಗಿ ಪಾಲಿಕೆ ಪ್ರತ್ಯೇಕವಾಗಿ ಇಬ್ಬರು ಸಿಬ್ಬಂದಿಗಳನ್ನು ನೇಮಿಸಿದೆ. ಒಬ್ಬರು ಬರುವ ಅಧಿಕಾರಿಗಳು, ಸಿಬ್ಬಂದಿಗಳು, ಸಾರ್ವಜನಿಕರಿಗೆ ಥರ್ಮಲ್ ಸ್ಕ್ರೀನಿಂಗ್ ಮಾಡಿದರೆ, ಮತ್ತೊಬ್ಬರು ಸ್ಯಾನಿಟೈಜರ್ ಹಾಕುತ್ತಿದ್ದರು. ಕಡ್ಡಾಯವಾಗಿ ಮಾಸ್ಕ್ ಧರಿಸುವಂತೆ ಮತ್ತು ಸಾಮಾಜಿಕ ಅಂತರ ಕಾಯ್ದುಕೊಳ್ಳುವಂತೆ ಸೂಚನೆ ನೀಡುತ್ತಿದ್ದರು.

ಇದಲ್ಲದೇ ಅನಾವಶ್ಯಕವಾಗಿ ಪಾಲಿಕೆಗೆ ಬರುತ್ತಿದ್ದ ಸಾರ್ವಜನಿಕರನ್ನು ಯಾವುದೇ ಕಾರಣಕ್ಕೂ ಸಿಬ್ಬಂದಿಗಳು ಒಳ ಬಿಡಲಿಲ್ಲ. ತುರ್ತು ಮತ್ತು ಅಗತ್ಯ ಕೆಲಸಗಳಿದ್ದರೆ ಮಾತ್ರ ಸಂಬಂಧಪಟ್ಟ ವಿಭಾಗಕ್ಕೆ ಮಾತ್ರ ಹೋಗಿ ಬರುವಂತೆ ತಾಕೀತು ಮಾಡಿ ಒಳಗೆ ಬಿಡುತ್ತಿದ್ದರು. ಇದರಿಂದಾಗಿ ಪಾಲಿಕೆ ಆವರಣದಲ್ಲಿ ಸಾರ್ವಜನಿಕರ ಓಡಾಟ ವಿರಳವಾಗಿತ್ತು.

ಆದರೆ ಸಾರ್ವಜನಿಕರು ಸಣ್ಣಪುಟ್ಟ ಕೆಲಸಗಳಿಗೆ ಹಲವಾರು ಬಾರಿ ಪಾಲಿಕೆಗೆ ಅಲೆದಾಟ ನಡೆಸಬೇಕು. ಇದೀಗ ಕೊರೊನಾ ನೆಪದಲ್ಲಿ ನಮ್ಮನ್ನು ಪಾಲಿಕೆ ಒಳಗೆ ಬಿಡುತ್ತಿಲ್ಲ. ಹೀಗಾದರೆ ನಮ್ಮ ಕೆಲಸಗಳನ್ನು ಹೇಗೆ ಮಾಡಿಸಿಕೊಳ್ಳುವುದು ಎಂದು ಅಸಮಾಧಾನ ವ್ಯಕ್ತಪಡಿಸಿದರು. ಒಟ್ಟಿನಲ್ಲಿ ಕೊರೊನಾ ರೋಗ ಒಬ್ಬರಿಂದ ಒಬ್ಬರಿಗೆ ಹರಡದಂತೆ ಪಾಲಿಕೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುತ್ತಿರುವುದು ಸಮಾಧಾನದ ಸಂಗತಿಯೇ ಸರಿ ಎನ್ನುವುದು ಬಹುತೇಕ ಸಾರ್ವಜನಿಕರ ಅಭಿಪ್ರಾಯ.

# ಕುಲ್ಲೇಟಿರ ಕಪ್‌ಗೆ 25 ಲಕ್ಷ ರೂ.

ಬೆಂಗಳೂರು, ಏ.21 - 2018 ರಲ್ಲಿ ನಡೆದ ಕೊಡವ ಕೌಟುಂಬಿಕ ಹಾಕಿ ಕುಲ್ಲೇಟಿರ ಕಪ್‌ಗೆ ಕ್ರೀಡಾ ಪ್ರಾಧಿಕಾರದಿಂದ ಬಿಡುಗಡೆ ಮಾಡಿರುವ ಅನುದಾದನ ಮೊತ್ತ 25 ಲಕ್ಷ ರೂ.ನ ಚೆಕ್ಕನ್ನು ಶಾಸಕ ಕೆ.ಜಿ. ಬೋಪಯ್ಯ ಮೂಲಕ ಕಲ್ಲೇಟಿರ ಕುಟುಂಬಕ್ಕೆ ಹಸ್ತಾಂತರಿಸಲಾಯಿತು. ಸಚಿವ ಡಾ. ನಾರಾಯಣಗೌಡ ಅವರ ಪರವಾಗಿ ಕ್ರೀಡಾ ಇಲಾಖೆ ಆಯುಕ್ತ ಡಾ. ರವೀಂದ್ರ ಚೆಕ್ಕನ್ನು ಹಸ್ತಾಂತರಿಸಿದರು. ಸಚಿವರ ಆಪ್ತ ಕಾರ್ಯದರ್ಶಿ ಪ್ರಭಾಕರ್, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.

# ಸೋಮೇಶ್ವರ ವಿದ್ಯಾಲಯದಲ್ಲಿ ಇಂದು ಕೋವಿಡ್ ಲಸಿಕೆ



ದಾವಣಗೆರೆ ಜಿಲ್ಲಾಡಳಿತ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಮಹಾನಗರ ಪಾಲಿಕೆ ಸಂಯುಕ್ತಾಶ್ರಯದಲ್ಲಿ ಶ್ರೀನಿವಾಸ ನಗರ, ಲೆನಿನ್ ನಗರ, ಮೌನೇಶ್ವರ ಬಡಾವಣೆ, ಹೆಚ್‌ಕೆಆರ್ ಸರ್ಕಲ್ ಹಾಗೂ ಇತರೆ ಬಡಾವಣೆಗಳ ಸ್ಥಳೀಯ ನಿವಾಸಿಗಳಿಗೆ ಕೋವಿಡ್-19 ಲಸಿಕಾ ಉತ್ಸವ ಕಾರ್ಯಕ್ರಮ ವನ್ನು ನಿಟುವಳ್ಳಿ ರಸ್ತೆಯ ಸೋಮೇಶ್ವರ ವಿದ್ಯಾಲಯದಲ್ಲಿ ಏರ್ಪಡಿಸಿದ್ದು ಶಾಸಕ ಎಸ್.ಎ. ರವೀಂದ್ರನಾಥ್ ಚಾಲನೆ ನೀಡಲಿದ್ದಾರೆ. 45 ವರ್ಷ ಮೇಲ್ಪಟ್ಟವರು ಕೋವಿಡ್-19 ಲಸಿಕೆ ಪಡೆಯಲು ತಮ್ಮ ಆಧಾರ್ ಕಾರ್ಡ್ ಹಾಗೂ ಆಧಾರ್ ಕಾರ್ಡ್‌ನಲ್ಲಿ ನೋಂದಾಯಿಸಿರುವ ಮೊಬೈಲ್ ಸಂಖ್ಯೆಯ ಮೊಬೈಲನ್ನು ಕಡ್ಡಾಯವಾಗಿ ತೆಗೆದುಕೊಂಡು ಬರಬೇಕು.

# ವನ್ಯಜೀವಿಗಳಿಂದ ಸಾಕು ಪ್ರಾಣಿಗಳು ಮೃತಪಟ್ಟಲ್ಲಿ ಪರಿಹಾರ ಹೆಚ್ಚಳ

ಬೆಂಗಳೂರು, ಏ.21 - ವನ್ಯಜೀವಿ ಸಂಘರ್ಷ ದಿಂದ ಹಸು, ಎಮ್ಮೆ, ಕೋಣ ಮೃತಪಟ್ಟಲ್ಲಿ ಅವುಗಳ ಮಾಲೀಕರಿಗೆ ಈಗ ನೀಡಲಾಗುತ್ತಿರುವ ಪರಿಹಾರ ಹಣವನ್ನು 10 ಸಾವಿರ ದಿಂದ 75 ಸಾವಿರ ರೂಪಾಯಿ ಗಳಿಗೆ ಹೆಚ್ಚಿಸಲಾಗಿದೆ ಎಂದು ಅರಣ್ಯ, ಕನ್ನಡ ಮತ್ತು ಸಂಸ್ಕೃತಿ ಸಚಿವ ಅರವಿಂದ ಲಿಂಬಾವಳಿ ತಿಳಿಸಿದ್ದಾರೆ.

ಈ ಸಂಬಂಧ ನಿನ್ನೆ ಸರ್ಕಾರದಿಂದ ಅಧಿಕೃತ ಆದೇಶ ಹೊರಡಿಸಲಾಗಿದೆ ಎಂದು ಅವರು ಹೇಳಿದ್ದಾರೆ.ವನ್ಯಜೀವಿಗಳಿಂದ ಸಾಕು ಪ್ರಾಣಿಗಳ ಹತ್ಯೆ ಆದಲ್ಲಿ ತಕ್ಷಣಕ್ಕೆ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು 20 ಸಾವಿರ ರೂಪಾಯಿಗಳನ್ನು ಬಿಡುಗಡೆ ಮಾಡಲು ಅವಕಾಶ ನೀಡಲಾಗಿದೆ. ಅನಂತರ ಸ್ಥಳೀಯ ಪಶುವೈದ್ಯಾಧಿಕಾರಿಗಳು ಸತ್ತ ಸಾಕು ಪ್ರಾಣಿಯ ಪರಿಶೀಲ ನೆ ನಡೆಸಿ ಪ್ರಮಾಣ ಪತ್ರ ನೀಡಿದ ನಂತರ ಉಳಿದ ಮೊತ್ತ,( ಗರಿಷ್ಠ ರೂ 75000-00 ಮಿತಿಗೆ ಒಳಪಟ್ಟು ) ಪಾವತಿಸಬಹುದಾಗಿದೆ ಎಂದು ತಿಳಿಸಿದ್ದಾರೆ.ಇದರ ಜೊತೆ ಕುರಿ, ಮೇಕೆ ,ಆಡು ಮೃತಪಟ್ಟಲ್ಲಿ ಈಗ ನೀಡುತ್ತಿರುವ ರೂ 5000 ಪರಿಹಾರ ಧನವನ್ನು ರೂ.10 ಸಾವಿರಕ್ಕೆ ಹೆಚ್ಚಳ ಮಾಡಲಾಗಿದೆ ಎಂದು ಹೇಳಿದ್ದಾರೆ. ಈ ಆದೇಶದ ಮೂಲಕ ಜನಪ್ರತಿನಿಧಿಗಳು, ರೈತರು ಮತ್ತು ಸಾರ್ವಜನಿಕರ ಬಹು ದಿನಗಳ ಬೇಡಿಕೆಯನ್ನು ಈಡೇರಿಸಿ ದಂತಾಗಿದೆ ಎಂದು ಅವರು ತಿಳಿಸಿದ್ದಾರೆ.

# ಕರ್ತವ್ಯಕ್ಕೆ ಹಾಜರಾದ ಸಾರಿಗೆ ನೌಕರರು

ಬೆಂಗಳೂರು, ಏ.24 - ಕಳೆದ ಎರಡು ವಾರಗಳಿಂದ ಮುಷ್ಕರ ನಿರತ ಸಾರಿಗೆ ನೌಕರರು ಇಂದಿನಿಂದ ಕರ್ತವ್ಯಕ್ಕೆ ಹಾಜರಾಗಿದ್ದಾರೆ.

ಇದರಿಂದ ನಾಲ್ಕು ಸಾರಿಗೆ ನಿಗಮಗಳ ಬಸ್‌ಗಳು ರಸ್ತೆಗಿಳಿದಿವೆ. ಹೈಕೋರ್ಟ್ ನಿನ್ನೆ ಸೂಚನೆ ನೀಡಿದ ಬಳಿಕ ಎಚ್ಚೆತ್ತ ನೌಕರರು, ಇಂದು ಕರ್ತವ್ಯಕ್ಕೆ ಹಾಜರಾಗಿದ್ದರಿಂದ ಸಂಜೆ ವೇಳೆಗೆ 12 ಸಾವಿರ ಬಸ್‌ಗಳು ರಸ್ತೆಗಿಳಿದವು.

ಮುಖ್ಯನ್ಯಾಯಮೂರ್ತಿ ವಿಭಾಗೀಯ ಪೀಠ ಮುಷ್ಕರಕ್ಕೆ ಸಂಬಂಧಿಸಿದಂತೆ ನಾಳೆ ತೀರ್ಪು ನೀಡುತ್ತಿರುವ ಬೆನ್ನಲ್ಲೆ ಎಚ್ಚೆತ್ತುಕೊಂಡ ನೌಕರರು ಕರ್ತವ್ಯಕ್ಕೆ ಹಾಜರಾಗುತ್ತಿದ್ದಾರೆ. ತಮ್ಮನ್ನೂ ಸರ್ಕಾರಿ ನೌಕರರೆಂದು ಪರಿಗಣಿಸಬೇಕೆಂದು ಕಳೆದ ಎರಡು ವಾರಗಳಿಂದ ಮುಷ್ಕರ ನಿರತರಾಗಿದ್ದರು. ಸರ್ಕಾರ ಇವರ ಬೇಡಿಕೆಯನ್ನು ಮಾನ್ಯ ಮಾಡಿರಲಿಲ್ಲ. ಮುಷ್ಕರಕ್ಕೆ ಕ್ಯಾರೇ ಎನ್ನದ ಸರ್ಕಾರ ಪರ್ಯಾಯ ವ್ಯವಸ್ಥೆ ಕೈಗೊಂಡಿತ್ತು.

ಇದರಿಂದ ನೌಕರರು ಮುಜುಗರಕ್ಕೊಳಗಾಗಿದ್ದರು. ನ್ಯಾಯಾಲಯ ಮಧ್ಯೆ ಪ್ರವೇಶ ಮಾಡಿದ್ದರಿಂದ ನೌಕರರು ಕರ್ತವ್ಯಕ್ಕೆ ಹಾಜರಾಗಲು, ಸೋಂಕಿನ ತುರ್ತು ಪರಿಸ್ಥಿತಿಯಲ್ಲಿ ಜನರಿಗೆ ಅಗತ್ಯ ಸಾರಿಗೆ ಸೇವೆ ಕಲ್ಪಿಸಲು ಸಹಕಾರಿಯಾಗಿದೆ.

# ಕಂಚಿಕೇರಿ ಗ್ರಾ.ಪಂ. ಅಧ್ಯಕ್ಷರಾಗಿ ವೈ. ಹನುಮಂತಮ್ಮ



ಹರಪನಹಳ್ಳಿ, ಏ.20- ತಾಲ್ಲೂಕಿನ ಕಂಚಿಕೇರಿ ಗ್ರಾಮ ಪಂಚಾಯ್ತಿ ಅಧ್ಯಕ್ಷರಾಗಿ ಕಾಂಗ್ರೆಸ್ ಬೆಂಬಲಿತ ವೈ. ಹನುಮಂತಮ್ಮ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಉಪಾಧ್ಯಕ್ಷ ಸ್ಥಾನಕ್ಕೆ ಜರುಗಿದ ಚುನಾವಣೆಯಲ್ಲಿ ಜೊಳ್ಳಿ ಕೆಂಚಪ್ಪ 3 ಮತಗಳನ್ನು ಪಡೆದು ಪರಾಜಿತರಾಗಿದ್ದು, ಒಂದು ಮತ ಅಸಿಂಧುವಾಗಿದೆ. ಕಾಂಗ್ರೆಸ್ ಬೆಂಬಲಿತ ಪೋತಲಕಟ್ಟಿ ಹಾಲೇಶಪ್ಪ 20 ಮತಗಳನ್ನು ಪಡೆದು ಉಪಾಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿ ಈಶ್ವರ ಪ್ರಸಾದ್ ತಿಳಿಸಿದ್ದಾರೆ.

ಈ ಸಂದರ್ಭದಲ್ಲಿ ತಾ.ಪಂ. ಮಾಜಿ ಅಧ್ಯಕ್ಷ ಹೆಚ್.ರಾಜಪ್ಪ. ಪಿಎಲ್‌ಡಿ ಬ್ಯಾಂಕ್ ಮಾಜಿ ಅಧ್ಯಕ್ಷರುಗಳಾದ ಶಾಂತಕುಮಾರ ರೆಡ್ಡಿ, ಬಿದ್ರಿ ಕೊಟ್ರೇಶ್, ಮುಖಂಡರಾದ ಶ್ಯಾನಭೋಗರ ಪ್ರಸನ್ನಕುಮಾರ್, ಬಿದ್ರಿ ಸುನೀಲ್ ಕುಮಾರ್, ಎಂ.ಬಿ. ಅಂಜಿನಪ್ಪ, ಹಲಗೇರಿ ಮಂಜಣ್ಣ, ಕೆ.ಎಸ್. ಜಾತಪ್ಪ, ಈ.ವೆಂಕಟೇಶ್, ಹೆಚ್.ಹನುಮಂತಪ್ಪ, ತಳವಾರ ಕೆಂಚಣ್ಣ, ಮಡಿವಾಳರ ಮಂಜುನಾಥ್, ಚಲುವಾದಿ ಮಂಜಪ್ಪ, ಬಿ. ಮಾರುತಿ, ಹಳ್ಳಿಕೇರಿ ಕೊಟ್ರಯ್ಯ, ರೇವಣನಾಯ್ಕ, ಪಂಚಪ್ಪ, ಅಂಜಿನಪ್ಪ, ಮಹಂತೇಶ ನಾಯ್ಕ, ಹೊನ್ನೇನಳ್ಳಿ ಪರುಶುರಾಮ, ವೈ. ಗಣೇಶ್, ಭೀಮಣ್ಣ, ತಿರುಕಪ್ಪ, ನಾಗ ರಾಜ್, ಪಿಡಿಓ ಚಂದ್ರಶೇಖರ್, ಶ್ರೀನಿವಾಸ್ ಗುಂಡಗತ್ತಿ ಇನ್ನಿತರರಿದ್ದರು.

# ಕೊರೊನಾ ಸಾವು : ಜಮೀನಿನಲ್ಲಿ ಅಂತ್ಯಕ್ರಿಯೆಗೆ ಅವಕಾಶ

ಬೆಂಗಳೂರು, ಏ. 21 – ಕೊರೊನಾ ಸೋಂಕಿತರ ಅಂತ್ಯಕ್ರಿಯೆಗೆ ಸರದಿ ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ, ಕೊರೊನಾದಿಂದ ಮೃತಪಟ್ಟವರನ್ನು ಅವರ ಕುಟುಂಬದ ಜಮೀನಿನಲ್ಲಿ ಹೂಳಲು ರಾಜ್ಯ ಸರ್ಕಾರ ಅನುಮತಿ ನೀಡಿದೆ. ಕೊರೊನಾದಿಂದ ಮೃತಪಟ್ಟವರನ್ನು ಕುಟುಂಬದವರ ಜಮೀನಿನಲ್ಲಿ ಹೂಳಲು ಅವಕಾಶ ಕೊಡಬೇಕೆಂಬ ಮನವಿಗಳು ಬಂದ ಹಿನ್ನೆಲೆಯಲ್ಲಿ, ರಾಜ್ಯ ಸರ್ಕಾರ ಅನುಮತಿ ನೀಡಿದೆ. ಕೊರೊನಾದಿಂದ ಸಾವುಗಳು ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ರುದ್ರಭೂಮಿ ಹಾಗೂ ಚಿತಾಗಾರಗಳಲ್ಲಿ ಜನಜಂಗುಳಿ ಉಂಟಾಗುತ್ತಿದೆ. ಕುಟುಂಬದವರು ಈ ಸಂದರ್ಭದಲ್ಲಿ ಕೊರೊನಾ ಶಿಷ್ಟಾಚಾರಗಳನ್ನು ಪಾಲಿಸಲು ಸಾಧ್ಯವಾಗುತ್ತಿರಲಿಲ್ಲ ಎಂಬ ದೂರುಗಳು ಬಂದಿದ್ದವು.

# ಮೆಳ್ಳೇಕಟ್ಟೆಯ ಆಂಜನೇಯ ಸ್ವಾಮಿ ರಥೋತ್ಸವ ರದ್ದು

ದಾವಣಗೆರೆ, ಏ.21- ತಾಲ್ಲೂಕಿನ ಮೆಳ್ಳೇಕಟ್ಟೆ ಗ್ರಾಮದಲ್ಲಿ ಇದೇ ದಿನಾಂಕ 25 ರಂದು ಸಂಜೆ 6 ಕ್ಕೆ ನಡೆಯಬೇಕಾಗಿದ್ದ ಶ್ರೀ ಆಂಜನೇಯ ಸ್ವಾಮಿ ರಥೋತ್ಸವವನ್ನು ಕೊರೊನಾ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ರದ್ದು ಪಡಿಸಲಾಗಿದ್ದು, ಭಕ್ತರು ಸಹಕರಿಸುವಂತೆ ದೇವಸ್ಥಾನ ಸಮಿತಿ ಕಾರ್ಯದರ್ಶಿ ಡಿ. ದೇವರಾಜ್ ತಿಳಿಸಿದ್ದಾರೆ.

# ಜಿಲ್ಲೆಯಲ್ಲಿ 200 ದೃಢ

ದಾವಣಗೆರೆ, ಏ.21 - ಜಿಲ್ಲೆಯಲ್ಲಿ ಬುಧವಾರ 200 ಜನರಲ್ಲಿ ಕೊರೊನಾ ಸೋಂಕು ದೃಢಪಟ್ಟ ಬಗ್ಗೆ ವರದಿಯಾಗಿದ್ದು, ಸಕ್ರಿಯ ಸೋಂಕಿತರ ಸಂಖ್ಯೆ 990ಕ್ಕೆ ಏರಿಕೆಯಾಗಿದೆ. ದಾವಣಗೆರೆ ತಾಲ್ಲೂಕಿನಲ್ಲಿ 145, ಹರಿಹರ 24, ಜಗಳೂರು 5, ಚನ್ನ ಗಿರಿ 12, ಹೊನ್ನಾಳಿ 12 ಹಾಗೂ ಹೊರ ಜಿಲ್ಲೆಯ ಇಬ್ಬರಲ್ಲಿ ಸೋಂಕು ಪತ್ತೆ ಯಾಗಿದೆ. 57 ಜನರು ಗುಣ ಮುಖರಾಗಿ ಬಿಡುಗಡೆಯಾಗಿದ್ದಾರೆ.

**ರಂಜಾನ್ ರೋಜಾ ಸಮಯ**

ದಿನಾಂಕ : 22.04.2021
ಇಫ್ತೇಯಾರಿ ಸಮಯ : 6-47

ದಿನಾಂಕ 22.04.2021
ಸಹೇರಿ ಸಮಯ : 4-53




24ನೇ ವಾರ್ಡಿನಲ್ಲಿ ಕೋವಿಡ್ ಲಸಿಕೆ ಕಾರ್ಯಕ್ರಮ

ಶ್ರೀ ಎಸ್.ಎ.ರವೀಂದ್ರನಾಥ್, ಮಾನ್ಯ ಶಾಸಕರು,
ದಾವಣಗೆರೆ ಉತ್ತರ ವಿಧಾನಸಭಾ ಕ್ಷೇತ್ರ, ಇವರು ಚಾಲನೆ ನೀಡಲಿದ್ದಾರೆ.

ದಿನಾಂಕ:22-04-2021ನೇ ಗುರುವಾರ ಮತ್ತು
23-04-2021ನೇ ಶುಕ್ರವಾರ
ಸಮಯ: ಬೆಳಿಗ್ಗೆ 10.00 ರಿಂದ ಮಧ್ಯಾಹ್ನ 2.00 ಗಂಟೆಯವರೆಗೆ
ಸ್ಥಳ: ಸೂಪರ್ ಮಾರ್ಕೆಟ್, ಲೂರ್ಡ್ಸ್ ಬಾಯ್ಸ್ ಸ್ಕೂಲ್ ಪಕ್ಕ, ದಾವಣಗೆರೆ.
ನೋಂದಣಿ ಸಮಯ: ಬೆಳಿಗ್ಗೆ 9.30ರಿಂದ ಪ್ರಾರಂಭ.

ಸೂಚನೆ: 45 ವರ್ಷ ಮೇಲ್ಪಟ್ಟವರು ಕೋವಿಡ್–19 ಲಸಿಕೆ ಪಡೆಯಲು ತಮ್ಮ ಆಧಾರ್ ಕಾರ್ಡ್ ಹಾಗೂ ಆಧಾರ್ ಕಾರ್ಡ್‌ನಲ್ಲಿ ನೋಂದಾಯಿಸಿರುವ ಮೊಬೈಲ್ ಸಂಖ್ಯೆಯ ಮೊಬೈಲ್‌ನ್ನು ಕಡ್ಡಾಯವಾಗಿ ತೆಗೆದುಕೊಂಡು ಬರಬೇಕು.



ಪ್ರಸನ್ನ ಕುಮಾರ್ ಕೆ.
ಸದಸ್ಯರು, 24ನೇ ವಾರ್ಡ್,
ಮಹಾನಗರ ಪಾಲಿಕೆ, ದಾವಣಗೆರೆ.

ಸಾರ್ವಜನಿಕರು ಲಸಿಕೆ ಪಡೆದು ಕೋವಿಡ್ ರೋಗದಿಂದ ಮುಕ್ತರಾಗಲು ಕೋರಿದೆ.

JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte